ಗಿಟಾರ್ ಸಂಗೀತದ ಸಲಕರಣೆಯ ಪಾರ್ಟ್ಸುಗಳು.

ಗೋಲ್ಡ್ ಪ್ಲೇಟೆಡ್ ಪೆಗ್ಸ್	1 ಕ್ಕೆ	ರೂ	3 0 0
ಸಿಲ್ವರ್ ಪೆಗ್ಸ್	1 ಕ್ಕೆ		3 8 0
ಬ್ರಿಡ್ಜ್	1 ಕ್ಕೆ		1 8 0
ಟೈಲ್ ಪೀಸ್	1 ಕ್ಕೆ		1 8 0
ಸ್ಟೀಲ್ ಸ್ಟ್ರಿಂಗ್ಸ್	1 ಕ್ಕೆ		0 2 0
ಸಿಲ್ಕ್ ಸ್ಟ್ರಿಂಗ್ಸ್	1 ಕ್ಕೆ		0 4 0
ಸಿಲ್ವರ್ ಸ್ಟ್ರಿಂಗ್ಸ್	1 ಕ್ಕೆ		0 8 0
ಗಿಟಾರ್ ಕೇಸ್	1 ಕ್ಕೆ		12 0 0
ಗಿಟಾರ್ ಸ್ಟ್ಯಾಂಡ್	1 ಕ್ಕೆ		2 8 0
ಗಿಟಾರ್ ಸ್ಟ್ರಾಪ್	1 ಕ್ಕೆ		1 8 0
ಗಿಟಾರ್ ಪಿಕ್ಸ್	1 ಕ್ಕೆ		0 2 0
ಗಿಟಾರ್ ಟ್ಯೂನರ್	1 ಕ್ಕೆ		0 4 0
ಗಿಟಾರ್ ಪಿಕ್ ಗಾರ್ಡ್	1 ಕ್ಕೆ		0 4 0
ಗಿಟಾರ್ ಕ್ಯಾಪೋ ಟಾಸ್ಟರ್	1 ಕ್ಕೆ		0 8 0
ಗಿಟಾರ್ ಸ್ಲೈಡ್	1 ಕ್ಕೆ		0 4 0
ಗಿಟಾರ್ ಸ್ಲೈಡ್ ಬಾರ್	1 ಕ್ಕೆ		0 8 0
ಗಿಟಾರ್ ಸ್ಟ್ರಿಂಗ್ ವಿಂಡರ್	1 ಕ್ಕೆ		0 4 0
ಗಿಟಾರ್ ಸ್ಟ್ರಿಂಗ್ ಕಟ್ಟರ್	1 ಕ್ಕೆ		0 4 0
ಗಿಟಾರ್ ಸ್ಟ್ರಿಂಗ್ ಗೈಡ್	1 ಕ್ಕೆ		0 4 0
ಗಿಟಾರ್ ಸ್ಟ್ರಿಂಗ್ ಸೆಟ್	1 ಕ್ಕೆ		0 4 0
ಗಿಟಾರ್ ಸ್ಟ್ರಿಂಗ್ ಸೆಟ್	1 ಕ್ಕೆ		0 4 0

ಟೈಂ ಪೀಸ್‌ಗಳು.

ಇಂಡಿಯನ್ ಸೈಜಿನ ಟೈಂಪೀಸ್	1 ಕ್ಕೆ	3	6 0
ಜರ್ಮನ್ ಮೇಡ್ ಸ್ಮಾಲ್ ಟೈಂಪೀಸ್	1 ಕ್ಕೆ	2	2 0
ಲೆಗಲಿಯ ಅಮೆರಿಕನ್ ಟೈಂಪೀಸ್	1 ಕ್ಕೆ	6 9 0, &	6 15 0
ಲೆಗಲಿಯ ಸ್ಮಾಲ್ ಸೈಜಿನ ಅಮೆರಿಕನ್ ಟೈಂಪೀಸ್	1 ಕ್ಕೆ	7	2 0
ಲೆಗಲಿಯ ಅಮೆರಿಕನ್ ಸ್ಮಾಲ್ ಟೈಂಪೀಸ್ ರೌಂಡಿಯ ಡೈಲಿನವು	1 ಕ್ಕೆ	8	10 0
ವಿಗ್‌ವೆನ್ ಅಮೆರಿಕನ್ ಟೈಂಪೀಸ್	1 ಕ್ಕೆ	7	6 0
ವಿಗ್‌ವೆನ್ ಅಮೆರಿಕನ್ ಇಂಗ್ಲೀಷ್ ಬಾಕ್ಸ್ ಡೂಪಿಡ ಟೈಂಪೀಸ್	1 ಕ್ಕೆ	13	4 0
ಖಾತ್ರಿಯೂ ಬಂದೋಬಸ್ತೂ ಆದ ಪಾರ್ಸೆಲ್ ವಾಚ್	1 ಕ್ಕೆ	5	10 0
ತಿಲೋ ನಮೂನೆಯಲ್ಲಿ ಎಲ್ಲಾ ಹಾರ್ಟ್ ಕುಸಿಯ ವಾಕೆಟ್ ವಾಚ್	1 ಕ್ಕೆ	12	4 0
ನಿಕ್ಕಲ್ ಕೇಸ್ ಸಿಲಿಂಡರ್ ಮೂವ್‌ಮೆಂಟ್ ಸಾಕಾಧಾರಣ ತರಹ ರಿಸ್ಟ್ ವಾಚ್	1 ಕ್ಕೆ	5 4 0,	7 8 0, 10 0 0 & 12 8 0



ಶಿಲ್ಲಿಸಮೂಹ ಸಿರುವ್ಲಿನಮೂನೆ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಆಯಾಯಾ.

ತಾಯಿತಗಳಿಗಾಗಿ ವಿಳಾಸ:—ಎಂ. ಎಸ್. ಶಿಂಧ್ಯೆ ಆಂಡ್ ಬ್ರದರ್ಸ್.

ಭಾಷಣಗಳನ್ನೂ ಬಹಳ ಸ್ವಾರಸ್ಯವಾಗಿ ಮಾಡಿದರು. ಈ ಭಾಷಣಗಳೆಲ್ಲಾ ಮಧ್ಯಾಹ್ನ 2 ಗಂಟೆಯಿಂದ ಸಾಯಂಕಾಲ 5½ ಗಂಟೆ ವರೆಗೆ ನಡೆದು, ಅನಂತರ ಫಲಾಹಾರ, ಗಂಧ, ಪುಷ್ಪ, ತಾಂಬೂಲದಿಂದಲೂ, ಅಧ್ಯಕ್ಷರ ಉಪಸಂಹಾರದಿಂದಲೂ ರಾತ್ರಿ ಸುಮಾರು 8 ಗಂಟೆಗೆ ಸಭೆಯು ಬರಕಾಸ್ತಾಯಿತು.

ಎಚ್. ಡಿ. ಜೆನ್ನಮ್ಮಲ್ಲಪ್ಪ.
ಯಂ. ಯಲ್. ಸಿ.

ಕೊಡಗು ಕಮಿಶನರ್ ಸಾಹೇಬರವರಲ್ಲಿ ಒಂದು ವಿನಂತಿ.

ಅಯ್ಯಾ,

ವೀರಾಜಪೇಟೆ ಹೈಸ್ಕೂಲ್ ಬೋರ್ಡಿಂಗ್ ವಿಷಯ ತಾವು ಅನೇಕಾವೃತ್ತಿ, ಶಾಲೆಗೆ ದಯಮಾಡಿಸಿ ಈ ವಿಚಾರದಲ್ಲಿ ಮುಂದಾಗಬೇಕೆಂದು ವಿನಂತಿಸಿಕೊಂಡಿದ್ದರು. ಈ ಹೊತ್ತು ಸಾಲೆಯೊಳಗೆ ಬೋರ್ಡಿಂಗ್ ಆಗುವುದೆಂದು ಮಕ್ಕಳ ತಂದೆ ತಾಯಿಗಳೆಲ್ಲಾ ಆನಂದವಾಗಿತ್ತು. ಆದರೆ ಆದದ್ದೇನು? ಬರೀ ಗುಲ್ಲೇ. ಮಕ್ಕಳು ಬಾಡಿಗೆಗೆ ಪೆಗೆದುಕೊಂಡ ಮನೆಯನ್ನು ಮಾಲೀಕರು ಮಾರುತ್ತೀವೆಂಬುದಾಗಿ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಪೆಡ್‌ಮೊಸ್ತರು ಈ ವಿಷಯದಲ್ಲಿ ಏನು ಮಾಡುತ್ತಿದ್ದಾರೆ? ಶಾಲಾ ಇನ್ಸ್‌ಪೆಕ್ಟರ ಮತ್ತೆ ಕಮಿಶನರರ ನೋಟೀಸಿಗೆ ಇದನ್ನು ತರಲಿಲ್ಲವೋ? ಕೊಡಗು ಕಮಿಶನರಾದ ತಾವು ನೂರು ವರ್ಷದ ಅವಧಿಯಲ್ಲಿ ಅನೇಕ ಕೆಲಸಗಳನ್ನು ಕೈಕೊಂಡಿರಿ. ಯಾವ ಕೆಲಸವೂ ಕೊನೆಗಂಡಿಲ್ಲ. ದಕ್ಷಿಣ ಕೊಡಗಿನವರಿಗೆ ಮುಖ್ಯವಾದ ಈ ಕೆಲಸವನ್ನು ತಾವು ಹೋಗುವುದರೊಳಗೆ ಪೂರೈಸುವ ವಿಚಾರಣೆ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ. ಬೋರ್ಡಿಂಗು ಕಟ್ಟಡ ಕಟ್ಟಲು ತಡವಾಗುವುದಾದರೆ ಸದ್ಯಕ್ಕೆ ಪಂಗಾಮು ಬೋರ್ಡಿಂಗ್ ಇರುವ ಮನೆಯನ್ನಾದರೂ ಕ್ರಯಕ್ಕೆ ಪಡೆದುಕೊಂಡು ಮಕ್ಕಳ ಕ್ಷೇಮಕ್ಕೆ ತೊಂದರೆ ಬಾರದಂತೆ ನೋಡಬೇಕಾಗಿ ಕೋರುತ್ತೇನೆ. ಮನೆ ಮೂರಾಟವಾಗಿ ಬಿಟ್ಟರೆ ಸುಮಾರು ಮೂವತ್ತು ಸಲನ ತ್ರು ಹುಡುಗುಗಳಿಗೆ ಉಳಿಯಲಿಕ್ಕೆ ಜಾಗವಿಲ್ಲದೆ, ಪೇಟೆ ಹೊಟೇಲುಗಳಲ್ಲಿ ಉಳಕೊಂಡು ಅಪಾಯ ಸ್ಥಿತಿಯೇ ಹಾಳಾಗುತ್ತದೆ.

ಶಾಲಾ ಅಧಿಕಾರಿಗಳೂ ಸಹ ಈ ವಿಷಯದಲ್ಲಿ ಜಾಗರೂಕರಾಗಿ ಮುಂದೆ ಏರ್ಪಾಡು ಮಾಡಬೇಕಾಗಿ ಕೋರುತ್ತೇವೆ.

—

ಈ ಮಧ್ಯೆ ಕಮಿಶನರವರಾದ ತಾವು ನೂರ್ಜಿ ತಿಂಗಳಲ್ಲಿ ವರ್ಗವಾಗುತ್ತೀರೆಂದೂ ವರ್ತಮಾನ. ಹಾಗಾದರೆ ಈ ಹಾಸ್ಟೆಲಿನ ಗತಿಯೇನಾಗಬೇಕು. ಪೂರ್ತಿ ಹೊಸ ಕಮಿಶನರು ಬರುವುದು, ನೋಡುವುದು, ಏರ್ಪಾಟು ಕಳಹಿಸಿವುದು. ಸರಕಾರದ ಈ ರೀತಿಯ ವರ್ತನೆಯಿಂದ ದೈತರಲ್ಲಿ ಅವರ ಸಂಬಳ ಕಡಮೆಯಾಗುತ್ತದೆ ಆದ್ದರಿಂದ ತಾವು ದಕ್ಷಿಣ ಕೊಡಗಿನ ಒಡೆ ದೈತರ ಮೇಲೆ ಕನಿಕರವಿಟ್ಟು ಹೋಗುವುದರೊಳಗಾಗಿ ಮಕ್ಕಳಿಗೆ ಉಳಿಯಲಿಕ್ಕೆ ತಕ್ಕ ವಿಚಾರಾಯ ಮಾಡಿ ಹೋಗುವಿರೆಂದು ನಂಬುವ.

ತಮ್ಮ ಸೇವಕ,
ಬಡರೈತ.

ಡಿಸ್ಟ್ರಿಕ್ಟ್ ಬೋರ್ಡು.

ಈ ತಿಂಗಳ್ಲಿ ಡಿಸ್ಟ್ರಿಕ್ಟ್ ಬೋರ್ಡ್ ವೈಸ್ ಪ್ರೆಸಿಡೆಂಟರಾದ ಮ. ಶ್ರಿ ಖಾಂಡಂಡ ಚಂಗಪ್ಪನವರು ಡಿ. ಬೊ. ಸಂಬಂಧ ಪಟ್ಟ ಕೆಲಸಗಳನ್ನು ನುಂದೆ ಜರಗಿಸಲಿಕ್ಕಾ, ಮಾಡಿದ ಕೆಲಸ ಗಳನ್ನು ಇನ್ಸ್‌ಪೆಕ್ಷನ್ ಮಾಡಲಿಕ್ಕಾ ಅವಶ್ಯವಿರುವ ಎಲ್ಲಾ ಕಡೆಗೆ ಬುದ್ದಾಗಿ ಹೋಗಿ ಒಂದೆರಡು ದಿನವಿದ್ದು ಬರುತ್ತಾರೆಂದು ತಿಳಿಸುತ್ತಾರೆ ಇವರು ಯಾವ ಕಡೆಗೆ ಜೋಗ. ತ್ತಾರೆಂದು ಕೆಲವು ದಿನಕ್ಕೆ ಮುಂಚಿತವಾಗಿ "ಕೊಡಗು" ಮತ್ತು 'ಲೋಕಮಿತ್ರ' ಪತ್ರಿಕೆಗಳಲ್ಲಿಯೂ ಮತ್ತು ಆಯಾಯ ಡಿ. ಬೊ. ಮೆಂಬರರಿಗೂ ತಿಳಿಸಿಯೇ ಹೋಗುತ್ತಾರೆ. ಕೆಲವು ಕೆಲಸ ಗಳಲ್ಲಿ ಪಬ್ಲಿಕ್ ಒತ ಅಂದರೆ ಆಯಾಯ ಗ್ರಾಮಗಳ ಮತ್ತು ನಾಡಿನವರ ಬಗ್ಗುಟ್ಟಿನಲ್ಲಿ ನರ್ವರ ಸನ್ಮತದ ಅಧಿಕಾರ್ಯವು ಬೇಕಾಗುತ್ತೆ. ಆದ್ದರಿಂದ ತಮ್ಮ ಅಧಿಕಾರ್ಯಗಳನ್ನು ಮು ದ್ದಾಗಿ ತಮ್ಮ ತಮ್ಮ ಒಂದೆರಡು ನುಷ್ಯರ್ನೆರ ನುಂಖ್ಯವಾಗಲೇ ಯೂ ಪಂಚಾಯಿತಿದಾರರ ನುಮತಾತರವಾಗಲೀ ಯೂ ತಮ್ಮ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರ ಮೂಲಕವಾಗಲೀ ತಿಳಿಸಿದರೆ ಒಳ್ಳೆದಾಗಿ ಕಾಣತ್ಕೆಯಿಂದು ಸ್ಪಷ್ಟಲಿ ವಿನತಾಡಿದ್ದರು. ಅನ್ನು ಮುಂಜೆ ನರ್ವ ಡಿಸ್ಟ್ರಿಕ್ಟ್ ಬೋರ್ಡ್ ಕೆಲಸವ ನ್ನು ಕೋ-ಆಪರೇಟಿವ್ ಯೂನಿಯನ್ ಮತ್ತು ನೊಸ್ಟೆಟಿಗಳ ಮೂಲಕ ಮಾಡಿಸುತ್ತೇವೆಂದು ಹೇಸ್ಪವರೆ ಮಾಡುವದ. ಒಳ್ಳೇದೆಂದು ಜೋರ್ಡಿನವರ ಅಧಿಕಾರ್ಯವಾಗಿದೆ ಹೀಗೆ ಎಲ್ಲರೂ ಒಗ್ಗಟ್ಟಿನಲ್ಲಿ ಅವಶ್ಯವಿರುವ ಕಡೆ ಕೆಲಸವನ್ನು ನರ್ವರ ನಮ್ಮತದಿಂದ ಮಾಡಲು ಸಾಧ್ಯವಾಗುತ್ತದೆಯಲ್ಲದೆ ಪೈಸ್ಯಾ ಅಧಿಕಾರಿಗಳಿಗೂ ಸಹಾಯ ಮಾಡಿದಂತಾಗಿ ಕೆಲಸವನ್ನು ತಮ್ಮ ಗ್ರಾಮಗಳಲ್ಲಿ ದೈತರುಗಳೆ ಕೈಚಿಕಾರವಾಗಿ ಮಾಡಲಿಕ್ಕೆ ಸಾಧ್ಯ ವೆಂದು, ನೆನ್ನಲ್ಲಿ ಜರ್ಜಿಸಿದರು.

ಮಡಿಕೇರಿಯಿಂದ ಮದಾಪುರ—ಸೋಮವಾರಪೇಟೆಗೆ ಹೋಗುವ ಒರದಾಯಿಯಿಂದಲೆ ವೀರಾಜಪೇಟೆಯಿಂದ ಮೊ ಣಕಾಲುಮುರಿಗಾಗಿ ಹೋಗುವಂಥ ಒಳರಸ್ತೆಗಳು ಕಳೆದ ೬ ಲವ್ವ ವರ್ಷಗಳಿಂದ ಹಾಗೆಯೇ ಇದ್ದು ವ್ಯಾಪಾರಸ್ಥರಿಗೂ, ವ್ಯಾಪಾರಸ್ಥರಿಗೂ, ರೈತರಿಗೂ ಬಹಳ ತೊಂದರೆಯಾಗಿತ್ತು. ಈ ಬಗ್ಗೆ ನೆಸ್ಟಿಗಳು ಡಿ. ಪಿ. ಡಬ್ಲ್ಯು ಯವರ ಸ್ವಾಧೀನದಲ್ಲಿದ್ದು ಡಿ. ಪಿ ಡಬ್ಲ್ಯು ಯವರೇ ಇದರ ಕೆಲಸ ಮಾಡಿಸುತ್ತಿದ್ದರು. ಈ ಬರುವ ಏಪ್ರಿಲ್ ತಿಂಗಳಲ್ಲಿ ಈ ವರಸ್ತೆಗಳ ಜವೇರಿ ಮಾಡಲಿಕ್ಕೆ ಹಣ ಸ್ಯಾಂಕ್ಷನ್‌ಯಾಗಿದೆಯೆಂದು ಕೇಳಲಿಕ್ಕೆ ಸಂತೋಷ ಪಡುತ್ತೇವೆ. ಹೀಗೆಯೇ ಸುಂಟಿಕೊಪ್ಪಲಿಂದ ಸಿದ್ದಾಪುರಕ್ಕೆ ನೆಲ್ಲೂರು ಗ್ಯಾನುಕ್ಕಾಗಿ ಹೋಗುವ ರಸ್ತೆಯ ಎಡಬು ಕಡೆ ಕಾಡಿನ್ನು ಈ ಬರುವ ತಿಂಗಳಲ್ಲಿಯೇ ಕಡಿಸಿತ್ಯಾರೆಂದು ನಂ ಬುತ್ತೇನೆ.

ರೈತ.

ಸತ್ಯಾಗ್ರಹದ ಚಳವಳಿ.

ದೇಶ ಬಾಂಧವರಲ್ಲಿ ವಿನಂತಿ.

ಕಳೆದ ಭಾದ್ರ 'ಕೊಡಗು' ಪತ್ರಿಕೆಯಲ್ಲಿ ಶ್ರೀಯುತ ಐ. ಪಿ ಕಾರ್ಯಪ್ಪನವರು, ನಾನಿನ ವಿತಕ್ಕಾಗಿ ಸತ್ಯಾಗ್ರಹ ಮಂಡಳಿಯ ಸೆಕ್ರೆಟರಿ ಮತ್ತು ಟ್ರೆಜರರ್‌ತನದಿಂದ ಬಿಟ್ಟ ಕಾರಣವನ್ನು ತಿಳಿಸಿ ಬೇಕೆಂದು ಅನೇಕ ಹಿತಚಿಂತಕರು ನನಗೆ ಬರೆದಿರುತ್ತಾರೆ. ಸತ್ಯಾಗ್ರಹ ಕೆಲಸದಲ್ಲಿ ಎಲ್ಲಾ ಕೆಲಸವು ಬಹಿರಂಗವಾಗಿ ನಡೆಸಲ್ಪಡುವುದರಿಂದ ಅಲ್ಲಿ ಯಾವುದನ್ನೂ ಮುಚ್ಚಿಡುವುದು ಸತ್ಯಾಗ್ರಹಿಗಳ ತತ್ವಕ್ಕೆ ಸಲ್ಲದಾಗಿದ್ದು. ಆದ್ದರಿಂದ ಜನರ ಮನಸ್ಸಿನಲ್ಲಿರುವ ಕುತೂಹಲವನ್ನು ಹೋಗಲಾಡಿಸಲು ನಾನು ರಾಜಿನಾಮೆ ಮಾಡಿರುವ ಕಾರಣವನ್ನು ಕೊಡುವುದು ಆತ್ಯಾವಶ್ಯವಾಗಿ ಕಾಣುತ್ತೆ.

ನಮ್ಮ ಸತ್ಯಾಗ್ರಹ ಮಂಡಳಿಯ ಮುಂದಣ ಕಾರ್ಯಕ್ರಮ ಗಳ ಕುರಿತು ನಮಗೂ, ಮಂಡಳಿಯ ಕೆಲಸಗಾರ ಧಿನ್ಯಾಧಿಸ್ಯಾ ಯ ಬಂದದ್ದರಿಂದ ನಾವು ರಾಜಿನಾಮೆ ಕೊಟ್ಟು, ಅತ್ಯಾಸಕ್ತ ಭರಿತರಾದವರಿಗೆ ಇನ್ನೂ ಹೆಚ್ಚಿನ ಕೆಲಸಗಳನ್ನು ಸೊತಲು ಅನುಕೂಲ ಕೊಟ್ಟದ್ದಾಗಿದೆ. ನಾವು ರಾಜೀನಾಮೆ ಕೊಟ್ಟ ವಿಷಯದಲ್ಲಿ ದೇಶದ ಸತ್ಯಾಗ್ರಹದಿಂದ ಬಿಟ್ಟಿದ್ದಲ್ಲವೆಂದು ಸತ್ಯಾಗ್ರಹಿಗಳಿಗೆ ತಿಳಿಸುವುದಕ್ಕಾಗಿ ಈ ಬರಹವು.

ಸತ್ಯಾಗ್ರಹಿಗಳಾಗಿ ಇದುವರೆಗೆ ಮಾಡಿದ್ದಕ್ಕಿಂತ ಉತ್ಸಾಹದಿಂದಲೂ ಹೆಚ್ಚಿನ ಭರಿತರಾಗಿ ಕೆಲಸ ಮಾಡಿ ಮಹಾತ್ಮರ ಸಂದೇಶಗಳನ್ನು ತೊಲಗಾಣಾಚಲಿಕ್ಕೆ ಸಿದ್ಧರಿದ್ದೇವೆ. ಜಾವುರಾಜಿನಾಮೆ ಕೊಟ್ಟ ವಿಷಯದಲ್ಲಿ ದೇಶೀಯರಲ್ಲಿ ಕೆಲವರು ಅಂತರ್ ಲಾಗಾಯ್ತುನಿಂದಲೇ ಸತ್ಯಾಗ್ರಹಕ್ಕೂ, ಖಾದಿಪ್ರಚಾರಕ್ಕೂ, ನಿಷಾನಿಷೇಧಕ್ಕೂ ಸಂಬಂಧ ಬಂದವರು ಸ್ವಾರ್ಥವನ್ನು ಸಾಧಿಸಲು ದೇಶವನ್ನಾದರೂ ಸರಿ ಸರಕಾರವನ್ನಾದರೂ ಬಿಟ್ಟೆಗೆ ಪಾತ್ರರಾಗಬೇಕೆಂದಿರುವ ಕೆಲವು ಮಹಾನುಭಾವರೂ ಇಲ್ಲವೆ ಸಲ್ಲದ ಆರೋಪಣೆಗಳನ್ನು ಹೇಳಿಕ್ಕೊಂಡಿ ದ್ದಾರುಗಾಡುತ್ತಿರುವುದೂ ಸಹ ತಿಳಿದೆವು. ಇಂಥವರ ಆರೋಪಣೆಯಿಂದ ನನಗೆ ಹಿಡಿದ ಕೆಲಸವನ್ನು ಮಾಡಲು ಆತ್ಮಾಪವು ನೆಚ್ಚುವುದಲ್ಲದೆ ಕಡಮೆಯಾಗಲಾರದು.

ಸತ್ಯಾಗ್ರಹ ಲೆಕ್ಕ ಪತ್ರಗಳು ಬಹಳ ಜೆನ್ನಾಗಿ ಇಡಲ್ಪಟ್ಟು ನೆ ಸಿಡೆಟರ ಅನುಮತಿಯಲ್ಲದೆ ಯಾವ ಖರ್ಚೂ ಮಾಡಲ್ಪಟ್ಟಿಲ್ಲ. ನನ್ನ ಎಲ್ಲಾ ಲೆಕ್ಕಗಳನ್ನು ಮಂಡಳಿಯ ಪೈಸೆ ಪೈಸೆಗೂ ಯಾವದೊಂದು ವ್ಯತ್ಯಾಸವಿಲ್ಲದೆ ಕಳೆದ ವಾರ ಒಪ್ಪಿಸಿರುತ್ತೇನೆ. ಈ ವಿಷಯದಲ್ಲಿ ಯಾರೂ ಲೈಸ್ಸು ಸಂತೆಯ ಪಡಲಿಕ್ಕೆ ಕಾರಣವಿರುವುದಿಲ್ಲ. "ತಾನು ಕಳ್ಳ ಪರರ ನಂಬ" ಎಂಬಂತೆ ಕೆಲವರು ಈ ವಿಷಯದಲ್ಲಿ ಅರೋಪಣೆ ಹೇಳುವುದಾ ತಿಳಿಗುಂತಾಕ್ಕಿರೆಂದು ತಿಳಿದೆವು. ಕಳ್ಳರೇನು ಕಳ್ಳತನವು ಗೊ ತ್ತು. ತಾವು ಮೋಸಗಾರನಾಗಿದ್ದರೆ ಎಲ್ಲರೂ ಮೋಸಗಾರ ನೆಂದೆ ಭಾವಿಸುವರು. ಕುಡುಕನು ಎಲ್ಲರನ್ನೂ ಕುಡುಕರೆಂದು ಭಾವಿಸುವನು ಇಂದಾರ್ದುದು ಅವರವರ ಸ್ವಗುಣ ಮತ್ತು ದುರ್ಗುಣದ ಮೇಲೆ ಹೋಗುತ್ತೆ.

ಸರ್ವಾಜನಿಕ ಕೆಲಸ ನೂಡುವಾಗ ಇಂಥಾ ಅಡೆತಾಸೆಗೆಗಳು ಬಾರದಿರೆಯೂ ಬಂದೇ ಒರುತ್ತವೆ. ಭೂಲೋಕದ ಮನುಷ್ಯರಲ್ಲಿ ದೊಡ್ಡವನಾದ ಆ ಮಹಾತ್ಮ ಗಾಂಧಿಯವರ ವಿಷಯದಲ್ಲಿಯೂ ಸಹ ಆರೋಪಣೆ ಹೇಳುವ ಜನರೂ ಇ ದ್ದಾರೆ. ಆದ್ದರಿಂದ ಬಡ ಸತ್ಯಾಗ್ರಹಿಗಳಾದ ನಮ್ಮ ಮೇ ಲೆ ಈ ತರದ ಆರೋಪಣೆಗೆಗಳನ್ನು ಕೆಲವರು ಹೇಳುವುದು ಆಶ್ಚರ್ಯವೆಲ್ಲ.

ನಾವು ಕಳೆದ ಐದು ತಿಂಗಳಿಂದ ಮೊಡಿದ ಕೆಲಸವು ಎ ಷ್ಟರ ಮಟ್ಟಿಗೆ ದೇಶೀಯರಿಗೆ ಸಹಾಯಕವಾಗಿದೆಯೆಂಬುದು ಎಲ್ಲರಿಗೂ ತಿಳಿದಿದೆ. ನನಗೆ ಇದು ಎರಿಗೆ ಯಾವ ರೀತಿಯಲ್ಲಿ ಏ ಪಾಸುಭಾವರು ಸಹಾಯ ಮಾಡಿದ್ದೀರೋ, ಅವೇ ರೀತಿ ಇನ್ನು ಮುಂದಕ್ಕೂ ಎಲ್ಲರೂ ತಮ್ಮ ತನು ಮನ, ಧನದಲ್ಲಿ ಸಹಾಯ ಮಾಡಿ ಹಿಂದೀ ಸ್ವರಾಜ್ಯ ಸಾಧನೆಗೆ ನಿವಾಗಲೇ ಕಾಗಿ ಬೇಡುತ್ತೇನೆ.

ತಮ್ಮ ಸೇವಕ,
ಕೆ. ಸಿ. ಅಕ್ಕಪ್ಪ.

ವೀರಾಜಪೇಟೆ ಆಸ್ಪತ್ರೆ.

ದಕ್ಷಿಣ ಕೊಡಗಿನ ಮುಖ್ಯ ಸ್ಥಳವಾದ ವೀರಾಜಪೇಟೆ ಆಸ್ಪತ್ರೆಯು ದಿನೇ ದಿನೇ ಅಧಿಕ್ಯಾಭ್ಯಿಗೆ ಬರುತ್ತಾ ಇರುವುದು ಎಲ್ಲರಿಗೂ ತಿಳಿದೇ ಇದೆ. ಆವರೆ ಅನುಕ ಒಳ್ಳೆ ಕೆಲಸಕ್ಕೆ ಕೆ ಅವು ಅಡಚಣೆಗಳಿವೆ. ಅವುಗಳನ್ನು ಕೂಡಲೇ ನಂಬಂಧಪಟ್ಟ ಅಧಿಕಾರಿಗಳು ಹೋಗಲಾತಿಸಲಿಕ್ಕೆ ಸ್ಯಯತ್ನ ಪಡ ವರಾಗಿ ನಂಬುತ್ತೇನೆ.

1. ಡಿಸ್‌ಪೆನ್ಸರಿಯಲ್ಲಿ ಔಷಧಿಗೆ ಬರುವ ಜನರಿಗೆ ನಿಲ್ಲಲ್ಲಿಕ್ಕೂ ಯಾ ಕೂರಲಿಕ್ಕೂ ಸ್ಥಳವಿರುವುದಿಲ್ಲ. ಜನರು ಬ ಳಿಗೆ ನುಗ್ಗಿ ಬಿಡುತ್ತಾರೆಂಬ ಭಾವನೆಯಿಂದ ಒಬ್ಬ ಜವಾನನು ಬೆಬ್ಬಿಟ್ಟುನಲ್ಲೇ ಒಳಗೆ ಬಿಡುವುದಾಗಿದೆ. ಒಳಗಿನ ನಣ್ಣ ಎರಡು ರೂಮ್‌ಗಳು ಒಂದರಲ್ಲಿ ಮೂರು ಡಾಕ್ಟರುಗಳೂ, ಇ ನ್ನೊಂದರಲ್ಲಿ ಮೂರು ಕಂಪೌಂಡರುಗಳೂ ಇರುವುದಾಯಿತು. ಕಾಯಿಲೆಯೊಳಗಿ ಬರುವ ನಿತ್ಯಾನಸ್ಥರಾದ ಕಾಯಿಲಸ್ಥರು ಹೊ ರಗೆ ಕೂರಲಿಕ್ಕೆ ಜಾಗವಿಲ್ಲದೆ ನಿಲ್ಲುತ್ತಾ ಇರಬೇಕು. ಮೈ ಸೂರು, ಬೆಂಗಳೂರು ಕಡೆ ಕಾಯಿಲಸ್ಥರಿಗೆ ಕೂರಲಿಕ್ಕೆ ಬಹಳ ಅನುಕೂಲವಿರುವ ಸ್ಥಳಗಳನ್ನು ಮೂಡಿ ಅಲ್ಲಿ ಒಳ್ಳೆ ಬೆಂಚುಗಳ ನ್ನು ಇಟ್ಟಿರುತ್ತಾರೆ. ಇಂದೊಂದು ದಿನ ಬೆಳಗ್ಯೆ 9 ಗಂಟೆಯಿಂ ದ 11 ಗಂಟೆಯ ವರೆಗೆ ಕಾಯಿಲಸ್ಥರಿಗೆ ಮದ್ದು ಸಿಕ್ಕದೆ ಹೊ ರಗೆ ಕೂರಬೇಕಾಗುತ್ತದೆ. ಏಕಂದರೆ—ಇನ್ನೂರರಿಂದ ಮು ನ್ನೂರರ ವರೆಗೂ ಬುಧವಾರ ವಿನದಲ್ಲಿ ಅಥವಾ ವಾರಕ್ಕೊಂ ದಾವೃತ್ತಿ ಬರುವುದರಿಂದ ಈ ತೊಂದರೆಗಳು ಬಹಳ ಕಾಣುತ್ತೆ ವೆ. ಇಂಥಾದ್ದನ್ನು ಅಸಿಸ್ಟೆಂಟ್ ಸರ್ಜೆಯನ್ನರು ಸರಕಾರದ ಗೋಚರಕ್ಕೆ ಇನ್ನು ತಂದಿಲ್ಲವೋ? ತಂದಿದ್ದರೆ ಇದನ್ನು ನಿ ವಾರಿಸಲು ಏರ್ಪಾಡು ಮಾಡಿದ್ದಾರೋ ಎಂಬುದನ್ನು ತಿಳಿಯ ಬೇಕಾಗಿದೆ.

2. ವೀರಾಜಪೇಟೆ ಆಸ್ಪತ್ರೆಗೂ, ಮಡಿಕೇರಿ ಆಸ್ಪತ್ರೆಗೂ ವರ್ಷಂಪ್ರತಿ ಖರ್ಚಾಗುತ್ತಿರುವ ಹಣವನ್ನು ನೋಡಿದರೆ ಮ ಡಿಕೇರಿ ಆಸ್ಪತ್ರೆಗೆ ಹೆಚ್ಚಿಂದು ತಿಳಿಯುತ್ತೇನೆ. ಇದೊಂದು ಜೋರ್ದ್ಯವೇ ಸರಿ. ವೀರಾಜಪೇಟೆಯಲ್ಲಿ ಕಾಯಿಲಸ್ಥರ ಸಂ ಖ್ಯೆ ಹೆಚ್ಚು. ಮಡಿಕೇರಿಯಲ್ಲಿ ಎಷ್ಟೋ ಕಡಿಮೆ. ಹಾಗಾ ದರೆ ವೀರಾಜಪೇಟೆಗೆ ವಿಶೇಷ್ಯಾ ಹಣ ಖರ್ಚುಮಾಡ ಬಾರದು? ಮಡಿಕೇರಿ ಮುಖ್ಯ ನೆಲ್ಲನೆಂಬ ಭಾವನೆಯಿಂದ ಈ ರೀತಿ ಮಾಡಿದ್ದಾರೆಂಬುದು ಜನರ ಭಾವನೆ ಇಂಥಾ ನ್ಯೂನ ತೆಯನ್ನು ನಿವಲ್ ಸರ್ಜೆಯನ್ನರು ಹೋಗಲಾಡಿಸುವರೆಂದು ನಂಬುತ್ತೇನೆ.

3. ಕಾಯಿಲಸ್ಥರಿಗೆ ದಿನ ಒಂದಕ್ಕೆ ಬರೀ 0—3—0 ಆಣೆ ಗೆ ವಿಂಡಂತೆ ಊಟಕ್ಕೆ ಖರ್ಚು ಮಾಡುವರೆಂದು ತಿಳಿಯು ತ್ತೇನೆ. ಮದ್ರಾಸು ಅಧಿಪತ್ಯದ ಯಾ ಮೈಸೂರಿನ ಯಾವ ಆಸ್ಪತ್ರೆಯಲ್ಲಿಯೂ ಇಷ್ಟು ಕಡಿಮೆ ಖರ್ಚು ಮಾಡುವುದಿಲ್ಲ. ಹಾಗಾದರೆ ನನ್ನ ಅಧಿಕಾರಿಗಳು ಹಣ ಉಳಿಕೆ ಮಾಡಿ ಸರ ಕಾರಕ್ಕೆ ಖರ್ಚು ಕಡಿಮೆ ಮಾಡಬೇಕೆಂದು ಹೊಂಟಿದ್ದಾರೋ? ಕಾಯಿಲಸ್ಥರ ವಿಷಯದಲ್ಲಿ ಈ ತರದ ವಿಚಾರಣೆ ಸಂಭವದ್ದಲ್ಲ. ಕೊಡಗು ಜೀರಕಲ್ಲು ಜತೆಕದ್ದಿರುವಲಂ, ನುಲೆ'ರಿಯಂ ದಿಂದಲೂ ಪೀತಿತರಾಗಿರುವುದರಿಂದ ಅನರಲ್ಲಿ ಸಹ ಸಹನಾತಿ ಕ್ಯೆಯೇ ಇರುವುದಿಲ್ಲ. ಆದ್ದರಿಂದ ಮದ್ರಾಸು, ಬೆಂಗಳೂರು, ಮೈಸೂರು ಆಸ್ಪತ್ರೆಗಳಲ್ಲಿ ಕಾಯಿ ಲಸ್ಥರಿಗೆ ಸರಕಾರಿ ಎಷ್ಟು ಖರ್ಚು ಮಾಡುತ್ತಾರೋ ಅಷ್ಟೇ ಇಲ್ಲಿಯಣ ಆಸ್ಪತ್ರೆಯಲ್ಲಿ ಯೂ ಊಟಕ್ಕೆ ಖರ್ಚು ಮಾಡಬೇಕಾಗಿ ಸರಕಾರದವರಲ್ಲಿ ಕೋರುತ್ತೇನೆ.

ನಮ್ಮ ಕಾನ್ಸಿಲ್ ಮೆಂಬರುಗಳು ಈ ವಿಷಯದಲ್ಲಿ ಏ ನಾದರೂ ಮಾಡುವುದರಲ್ಲಿದ್ದಾರೋ? ಎಂದಾದರೂ ಆಸ್ಪತ್ರೆಗೆ ಹೋಗಿ ಇಂಥಾದ್ದನ್ನು ತಿಳಿದು ಸರಕಾರದ ಗೋಚರಕ್ಕೆ ತರ ಲು ಯತ್ನಿಸಿದ್ದಾರೋ ಎಂಬುದನ್ನು ತಿಳಿಯಲಿಚ್ಛಿಸುತ್ತೇನೆ. ಪಡದಿದ್ದರೆ ಕೂಡಲೇ ಈ ವಿಷಯಗಳನ್ನು ವಸಸ್ಸಿಗೆ ತೆಗೆದು ಕೊಂಡು ಸರಕಾರದ ಮುಂದಿಟ್ಟು ಬಡ ಕಾಯಿಲಸ್ಥರಿಗಿರುವ ಕೊಂದರೆಯನ್ನು ನಿವಾರಣೆ ಮಾಡಲು ಕೆಲಸ ನೂಡುವೆಂದು ನಂಬುತ್ತೇನೆ.

ಬಡ ಕಾಯಿಲಸ್ಥ.

ಕಾನ್ಸ್ಟೆಂಟು ವಿದ್ಯಾಭ್ಯಾಸದ ವಿಷಯ.

'ಕಾನ್ಸ್ಟೆಂಟುಗಳು ಏನು ವೆಡುತ್ತವೆ' ಎಂದು ಕೇಳುವ ಕ-ತೂಹಲಿಗೆ ಹೇಳುವ ಮಾತು.

ಅಯ್ಯಾ,

ಕಳೆದ ಐಂದೆರಡು ವರ್ಷಗಳಿಂದ 'ಕೊಡಗು ಪತ್ರಿಕೆಯಲ್ಲಿ ಕಾನ್ಸ್ಟೆಂಟಿಗಳ ಸಂಗತಿ ಐಂದೆರಡು ಲೇಖನಗಳನ್ನು ವಾಚಕ ಮಹಾಶಯರು ಓದಿ ಅವುಗಳ ತಿರುಳು, ಮರಳುಗಳನ್ನು ಜೆನ್ನಾ ಗಿ ತಿಳಿದಿರಬಹುದು. ಜೊತೆಗೆ ಕಳೆದ ವಾರದ 'ಕೊಡಗು' ಪತ್ರಿಕೆಯಲ್ಲಿ 'ತುರುಬರ ಪತ್ರಿಕೆ'ಯಿಂದ ಎಂಬ ಲೇಖಕರಿಂದ ಇದೇ ನಂಗತಿಯನ್ನು ಕುರಿತು ಐಂದು ಹಾಸ್ಯಾಸ್ಪದವಾದ ಲೇಖನವನ್ನು ನೋಡಿ ಆ ತುರುಬರ ಪತ್ರಿಕೆಯವರ ಬುದ್ಧಿ ಚ ಮತ್ಕಾರವು ಇಷ್ಟು ಕಿಮ್ಮತ್ತಿಯೂಯೆಂದೂ ತಿಳಿಯಲು ಚಿಂತಿಸುತ್ತೇನೆ.

ವೇ.ಲೆ ಹೇಳಿದ ಲೇಖನವನ್ನೋದಲು ಆ ನಂಗತಿಯು ನಿಜವೋ, ಸುಳ್ಳೋ ಎಂಬ ನಂಶಯವು ಹುಟ್ಟುತ್ತೆ. ಈ ತರದ ಕಟ್ಟು ಕಥೆಗಳು ಕಾನ್ಸ್ಟೆಂಟಿನವರ ಕೆಲಸವನ್ನೆಲ್ಲಾ ಕಪ್ಪು ಬಣ್ಣದಿಂದ ಬಣ್ಣಿಸುವ ವಿಷಯವನ್ನು ನಾನು ಈ ವೇಷ್ಠದಲೇ ನೋಡಿರುತ್ತೇನೆ. ಈ ಲೇಖನವು 'ಇನ್ನೊಂದು ಖಾಡಿಕರ ಕೆಯೊಗಿರುವುದು. ಯಾವ ಕಾನ್ಸ್ಟೆಂಟಿನಲ್ಲಿ 'ನನ್ನ ಅಕ್ಕನನ್ನು ಮತ್ತವರೀಯರು ಎತ್ತಿಕೊಂಡು ಹೋದರು'—ಎಂದು ಹೇಳಲು ಜೋಧಿಸುತ್ತಿರುವರು? ಅವರು ಯಾತೆ ಹಾಗೆ ಬೋಧಿಸಬೇಕು? ಪರಿಶೋಧಿಸಿ ನೋಡಿದಲ್ಲಾ ತುರುಬರ ಪತ್ರಿಕೆಯು 'ಕಾನ್ಸ್ಟೆಂಟಿನವರು ಸ್ವೀ ವಿದ್ಯಾರ್ಥಿಗಳನ್ನು ಬಲತ್ಕಾರದಿಂದ ಅ ವರ ಮತಕ್ಕೆ (ಕ್ರಿಸ್ತ ಮತಕ್ಕೆ) ಸೇರಿಸುತ್ತಾರೆ ಎಂಬ ತಪ್ಪು ಅಭಿಪ್ರಾಯ ಪಟ್ಟಂತೆ ತೋರುತ್ತೆ. ಇದಕ್ಕೆ ನಾನು ವಿಷಾ ಧಿಸುತ್ತೇನೆ. ಅದರ

ಕೊಡಗು ಸತ್ಯಾಗ್ರಹ ಮಂಡಳಿ,
ವೀರಾಜಪೇಟೆ. ತಾ. 1—1—1931.

ನೋಟೀಸು.

ಈ ದಿನ ಸತ್ಯಾಗ್ರಹ ಮಂಡಳಿಯ ಟ್ರೆಜರರವರ ಲೆಕ್ಕವನ್ನು ಚೆಕ್ ಮಾಡಿ ನೋಡಿದಲ್ಲಿ ಎಲ್ಲಾ ಲೆಕ್ಕಗಳೂ ಸರಿಯಾಗಿ ಕಂಡು ಬಂದಿದೆ.

ಅಜ್ಜನಮಾಡ ಮಾದಪ್ಪ,
ಸತ್ಯಾಗ್ರಹ ಮಂಡಳಿಯ ಪ್ರೆಸಿಡೆಂಟ್.

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗು ಕಮಿಶನರವರು ಕಳೆದ ತಾ. 1ರಲ್ಲಿ ಕೊಡಗು ಕನ್ಸಲ್‌ನಿಂದ ಬಂದಿರುತ್ತಾರೆ.

ಕಣ್ಣಾನೂರು ಜೈಲಿನಲ್ಲಿರುವ ಶ್ರೀಮತ ಸುಬ್ಬಯ್ಯಂಡ ಬೆಳ್ಯಪ್ಪನವರಿಗೆ ಡಿನೆಂಟ್ಸ್ ಕಾಯಿಲೆಯೆಂದು ತಿಳಿಯುತ್ತೇವೆ.

ಮೆ. ಕಂಜಿತಂಡ ನಿಮ್ಮಯ್ಯನವರನ್ನು ಗುಂಡು ಹೊಡೆದು ಕೊಂದ ಮೊಖದನ್ಮೆಯು ಇನ್ನೂ ವಿಚಾರಣೆಯಲ್ಲಿದೆ.

ಕೊಡಗು ಜೀಲದ ಅನೇಕ ಕಡೆಗಳಲ್ಲಿ ಮಳೆ ಬಿದ್ದಿದೆ. ಬೆಳೆ ಕಟಾವು ಸಮಯದಲ್ಲಿ ಮಳೆ ಬಂದದ್ದರಿಂದ ಅನೇಕರಿಗೆ ನಷ್ಟವುಂಟಾಗಿದೆ.

ಕೊಡಗು ಚೀಫ್ ಕಮಿಶನರವರು ಈ ತಾ. 8ರಲ್ಲಿ ಇಲ್ಲಿಗೆ ಒಂದು ತಾ. 28ರ ವರೆಗೆ ದಕ್ಷಿಣ ಕೊಡಗಿನಲ್ಲಿಯೇ ಇರುವರೆಂದು ವರ್ತಮಾನ.

ಮೂಸಂತೋಡಿಗೆ ಪರ್ಗವಾದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾದ ಮೆ: ಸಿ. ಯಂ. ಹುಕಾಲಪ್ಪನವರು ನಾಳೆ ಅಲ್ಲಿಯ ಚಾರ್ಜು ತೆಗೆದುಕೊಳ್ಳಲಿಕ್ಕಿರುವರು.

ಸಿದ್ದಾಪುರದ ಬಳಿ ಚಿಕ್ಕನಹಳ್ಳಿ ತೋಟದ ರೈಟರಾದ ಮೆ. ಜೋಸೆಫ್‌ರವರ ಪುತ್ರನಾದ ಮೆ. ಜೋಸೆಫ್ ಜಾನ್ ಎಂಬವರು ಕಳೆದ ತಾರೀಕು 23 ರಲ್ಲಿ ಸುತ್ತಮುತ್ತಲೂ ಬಹಳ ದಿನಕಾಗಿದ್ದ ನಾಶಕಾರಿ ಸಿತ್ತಿರುವ ಒಂದು ದೊಡ್ಡ ಹೆಬ್ಬಾಲಿಯನ್ನು ಹೊಡೆದು ಕೊಂದಿರುತ್ತಾರೆಂದೂ ತಿಳಿಯುತ್ತೇವೆ.

ಕೊಡಗು ಸತ್ಯಾಗ್ರಹ ಮಂಡಳಿಯವರ ಕೆಲಸವು ಎಂದಿನಂತೆ ಉತ್ತಾಹದಿಂದ ನಡೆಯುತ್ತಾ ಇದೆ. ಕಳೆದ ವಾರ ಗೋಣಿಕೊಪ್ಪಲು ಕಡೆಯಲ್ಲಿ ಕೆಲವರು ಬೈನೆಸರ ಕಡಿದರೆಂದೂ, ಗ್ಯಾನುಗಳಲ್ಲಿ ಸೇರಿದ ಇಳಿಸುವುದನ್ನು ಬಾಕಿ ಮಾಡಲು ಒಹ ಕೆಲಸ ಮಾಡಿದರೆಂದೂ ತಿಳಿಯುತ್ತೇವೆ.

ಕಳೆದ ವರ್ತಮಾನದಲ್ಲಿ ಮದ್ರಾಸು ಗವರ್ನರರು ಕೊಡಗಿಗೆ ದಯ ಮಾಡಿಸಿದ್ದು ಸರಿಯೆಷ್ಟೆ. ಅವರು ತಾಳತ್ ಮನೆ ಕಡೆ ಗಾಳಿಸವಾರಿ ಹೋದವರು ಲೇಟ್ ಆಯರು ಗುರ್ಖಪ್ಪರೈಯವರ ಮನೆಯ ಎರಡು ಪೊಟೋಗಳನ್ನು ತೆಗೆದರೆಂದ್, ಅದರ ಪ್ರತಿಗಳನ್ನು ಮನೆಯವರಿಗೆ ಕಳುಹಿಸಿದ್ದಾರೆಂದೂ ವರ್ತಮಾನ.

ಕೊಡಗು ಕಮಿಶನರವರ ರೆವಿನ್ಯೂ ಆಫೀಸು ಹೆಡ್ ಕ್ಲಾರ್ಕ್ ಮೆ. ಕೆ. ವೆಂಕಟರಾಮಯ್ಯನವರ ಮಗಮೆ ಕೆ ವಿ. ವೆಂಕಟಗಿರಿ ಬಿ. ಎ ಯಲ್. ಯಲ್. ಬಿ ಮೈಸೂರು ಹೈಕೋರ್ಟು ಅಡ್ವೊಕೇಟರು ಈ ತಾ. 2ರಂದ ಮಡಿಕೇರಿಯಲ್ಲಿ ಆಮುರು ಕೆಲಸವನ್ನು ಕೈಕೊಂಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ

ಕೊಡಗು ಸತ್ಯಾಗ್ರಹ ಮಂಡಳಿಯ ಸೆಕ್ರೆಟರಿ, ಮತ್ತು ಟ್ರೆಸರರಾದ ಮ. ಏ. ಏ ಕಾರ್ಯಪ್ಪನವರೂ ಮತ್ತು ಶ್ರೀಮತಿ ಕೆ. ಸಿ. ಅಕ್ಕಪ್ಪನವರೂ ಕೊಟ್ಟ ರಾಜೀನಾಮೆಯನ್ನು ಕಮಿಟಿಯವರ ಕೋರಿಕೆ ಮೇರೆ ವಾಪ್ಸು ತೆಗೆದಿದ್ದಾರೆಂದೂ, ಸೆ. ವಿನಂಡ ಕಾರ್ಯಪ್ಪನವರನ್ನು 1 ತಿಂಗಳ ಮಟ್ಟಿಗೆ ಡಿಕ್ಟೇಟರಾಗಿ ನೇಮಿಸಿರುತ್ತಾರೆಂದೂ, ಖಾಸುರು ಅಧ್ಯಕ್ಷರಾದ ಮೆ. ಅಜ್ಜನಮಾಡ ಮಾದಪ್ಪನವರು 1 ತಿಂಗಳ ರಜೆಯಲ್ಲಿರುವುದಾಗಿಯೂ ಸಹ ತಿಳಿಯುತ್ತೇವೆ.

ಹಿಂದೂದೇಶ.

1929—1930 ರಲ್ಲಿ ಹಿಂದೂದೇಶಕ್ಕೆ ಪರದೇಶಗಳಿಂದ ಇನ್ನೂರ ಪಲವತ್ತೊಂಬತ್ತು ಕೋಟಿ, ತೊಂಬತ್ತೇಳು ಲಕ್ಷ ರೂಪಾಯಿಗಳ ಸಾಮಾನುಗಳು ಬಂದಿರುತ್ತೆ. ಈ ಪೈಕಿ ನೂರ ಇಪ್ಪತ್ತೈದು ಕೋಟಿ, ಎಂಬತ್ತೊಂಭತ್ತು ಲಕ್ಷ ರೂಪಾಯಿ ಸಾಮಾನುಗಳು ಬ್ರಿಟಿಷ್ ಸಾಮ್ರಾಜ್ಯದಿಂದ ಬಂದದ್ದಾಗಿತ್ತು.

ಬೊಂಬಾಯಿಯಲ್ಲಿ ಖಾದಿ ಪ್ರದರ್ಶನವನ್ನು ಕಳೆದ ವಾರ ಶ್ರೀಮತೀ ಹಂಸಾಮೇಥ್ತಾರವರು ತೆರೆದಾಗ ಖಾದಿಯೇ ಒಡವರ ಭಾಗ್ಯಲಕ್ಷ್ಮಿಯೆಂದೂ, ಹಸಿದವರ ಹೊಟ್ಟೆಗೆ ಅನ್ನನೀಡುವ ತಾಯಿಯೆಂದೂ ಹೇಳಿದರು.

ಶ್ರೀಮತೀ ಕಸ್ತೂರಿಬಾಯಿ ಗಾಂಧಿಯವರೂ ಸಹ ಖಾದಿಯೇ ಸ್ವರಾಜ್ಯದ ಹಾದಿಯೆಂದೂ, ಅದನ್ನು ಹೆಚ್ಚಾಗಿ ಹುಟ್ಟಿಸಿ, ಪ್ರಾದಿಯನ್ನೇ ಧರಿಸುವ ಪ್ರತಿಜ್ಞೆಯನ್ನು ಮಾಡಿರಿ ಎಂದು ಹೇಳಿದರು.

ಪಂಡಿತ ನೋತಿಶಾಲ ದೇಹಪ್ರಕೃತಿಯು ದಿನ ದಿನಕ್ಕೂ ಚೆನ್ನಾಗಿ ಆಗುತ್ತಾ ಬರುತ್ತದೆ ಎಂದು ತಿಳಿಯುತ್ತೇವೆ ಅವರು ಈಗ ಕಲಕತ್ತದ ಹತ್ತಿರ ಕವಿರಾಜ ಶ್ಯಾಮದಾಸ ವಾಚಸ್ಪತಿಯವರಿಂದ ಉಪಚಾರಪಡುತ್ತಿದ್ದಾರೆ.

ಕಳೆದ ಆಕ್ಟೋಬರ್ ವರೆಗೆ 68,000 ಸಾವಿರಕ್ಕಿಂತ ಚೆಚ್ಚು ಜನರು ರಾಜಕೀಯ ಕೈದಿಗಳಗಳಾಗಿದ್ದಾರೆಂದು ತಿಳಿಯುತ್ತೇವೆ ಈ ಪೈಕಿ.

ಬಂಗಾಳದಲ್ಲಿ	13,500
ಗುಜರಾತ	13,000
ಬಿಹಾರ	11,240
ಸಂಯುಕ್ತ ಪ್ರಾಂತ್ಯ	9,180
ಪಂಜಾಬು	9,000
ಬೊಂಬಾಯಿ	8,000
ಮದ್ರಾಸು	5,000
ಜುಮ್ಲ.	68,920

ಸಿಂದಿಯೆಂಬುವ ಊರೊಳಗಿನ ಲಕ್ಷ್ಮೀನಾರಾಯಣ ಗುಡಿಯ ಯಜಮಾನರು ಒಂದು ದಿನದ ದೇವರಿಗೆ ವಿದೇಶೀ ಬಟ್ಟೆಗಳನ್ನು ತೊಡಿಸಿ ಊಟಕ್ಕೆ ಕುಳಿತುಕೊಂಡರು. ಊಟಕ್ಕೆ ಕುಳಿತ ಕೂಡಲೇ ಆವರಿಗೆ ಅನ್ನದಲ್ಲಿ ಹುಳ ಕಾಣಿಸಿ ಹಸ್ತಿದವು. ಅದರ ಕಾರಣವರಿತು ಅವರು ಕೂಡಲೇ ದೇವರ ಮೈಯೊಳಗಿನ ಪರದೇಶೀ ಆರಿವೆಗಳನ್ನು ತೆಗೆಯಿಸಿದರು. ಅನ್ನ ದೊಳಗಿನ ಹುಳಗಳೆಲ್ಲ ಮಾಯವಾವವು ದೇವರೂಗೂ ಸಹ ಪರದೇಶಿ ಆರಿವೆಯು ಬೇಡವಾಯಿತು. ಪರದೇಶಿ ಬಟ್ಟೆಗಳನ್ನು ಧರಿಸುವವರು ಇದರಿಂದ ದೋಧನೆ ತೆಗೆದುಕೊಳ್ಳಬೇಕು.

ಡೆಲ್ಲಿಯಲ್ಲಿ ಸಿ. ಕ್ಲಾಸ್ ಸ್ತ್ರೀ ಕೈದಿಗಳು ಉಪವಾಸವನ್ನು ತವನ್ನು ಕೈಕೊಂಡಿದ್ದರಷ್ಟೆ. ಸ್ತ್ರೀಯರುಗಳಿಗೆಲ್ಲಾ ಬಿ ಕ್ಲಾಸ್ ತರಗತಿಗೆ ಸೇರಿಸಲ್ಪಟ್ಟ ಕಾರಣ ಅನ್ನಗ್ರಹಣ ಮಾಡಲು ಸುರು ಮಾಡಿದರು.

ಗೋದಾವರಿಯ ಪೆದ್ದಾಪುರದಲ್ಲಿ ಕಾಂಗ್ರೆಸ್ ಜನರು ಸುತ್ತು ಇನ್ನು ಅನೇಕರು ಒಂದು ಜಾಗದಲ್ಲಿ ವನಭೋಜನಕ್ಕೆ ಕುಳಿತಾಗ ಪೊಲೀಸಿನವರು ಕಾರಣವಿಲ್ಲದೆ ಲಾಠಿ ಚಾರ್ಜು ಮಾಡಿ ಅನೇಕರಿಗೆ ಗಾಯ ಪಡಿಸಿರುವರು. ಈ ವಿಷಯದಲ್ಲಿ ಮದ್ರಾಸು ಅಧಿಸ್ಯದ ಅನೇಕ ಕಡೆಗಳಲ್ಲಿ ಬಹಳ ಮಿಸಸ್ಕಾಪಗಳು ಹುಟ್ಟಿವೆ. ಮದ್ರಾಸು ಶಾಸ್ಸಿಲಿಗೂ ಪರಾವು ಕಳುಹಿಸಿರುತ್ತಾರೆ

ಲಕ್‌ನೋ ಕಾಂಗ್ರೆಸ್ ಕಮಿಟಿಯವರು ಕಳೆದ ವಾರ ಬಳಿಯು ದಿನವನ್ನಾ ಜರಿಸಿದರು. ಸ್ತ್ರೀಯರುಗಳೆಲ್ಲರೂ, ಪರದೇಶೀ ಬಟ್ಟೆ ಬಹಿಷ್ಕಾರಕ್ಕೆ ಜನರಿಂದ ಪ್ರತಿಜ್ಞೆ ರುಜು ತೆಗೆದು ಕೊಳ್ಳುತ್ತಿದ್ದರು. ಯಾರೂ ಮಾಡುವುದಿಲ್ಲವೆಂದು ಹೇಳಿದವರೂ ಅವರಿಗೆಲ್ಲರಿಗೂ ಎರಡೆರಡು ಬಳೆಗಳನ್ನು ತೊಟ್ಟುಕೊಳ್ಳಲಿಕ್ಕೆ ಉಪಯುಕ್ತರಾಗುತ್ತಿದ್ದರು. ಈ ಕೆಲಸದಲ್ಲಿ ಯಾರನ್ನು ಸರಕಾರದವರು ದಸ್ತಗಿರಿ ಮಾಡಿರುವುದಿಲ್ಲ.

ಹಿಂದೂಸ್ಥಾನಕ್ಕೆ ಡೊವಿನಿಯನ್ ಸ್ಟೇಟಸ್ ಕೊಡಬೇಕೋ, ಬೇಡವೋ ಎಂಬ ವಿಷಯದಲ್ಲಿ ಟಯಮ್ಸ್ ಆಫ್ ಇಂಡ್ಯಾ ಪತ್ರಿಕಾಕರ್ತರು ಇಲ್ಲಿಂದ ಓಟುಗಳನ್ನು ತೆಗೆದದ್ದರಲ್ಲಿ 818 ಜನರು ಇದಕ್ಕೆ ಬೆಂಬಲ ಕೊಟ್ಟರೆಂದೂ, 165 ಜನರು ವಿರೋಧಿಸಿದೆಂದೂ ತಿಳಿಯುತ್ತೇವೆ. ಈ ಕಾರಣದಿಂದ ಸರಕಾರ ಉದ್ಯೋಗಸ್ಥರಲ್ಲದ ಇಂಗ್ಲಿಷ್ ಜನರು ಡೊವಿನಿಯನ್ ಸ್ಟೇಟಸ್ಸಿಗೆ ಸರವಾಗಿದ್ದಾರೆಂಬುದು ಖಂಡಿತವಾಯಿತು

ಆಸೆಂಬ್ಲಿಯ ಅಧ್ಯಕ್ಷರಾಗಿದ್ದ ವಿಠಲಭಾಯಿ ಪಟೇಲರು ಈಗ ಕೂಯಂಬತ್ತೂರು ಬೈಲಿನಿಸ್ಥಿರುವುದು ಸರಿಯಷ್ಟೆ. ಬೊಂಬಾಯಿಯಿಂದ ಇಬ್ಬರು ಪ್ರಸಿದ್ಧ ಡಾಕ್ಟರುಗಳು ಬಂದು ಕಳೆದ ವಾರ ಅವರ ಪರೀಕ್ಷೆ ಮಾಡಿ ತಮ್ಮ ಪರೀಕ್ಷೆಯ ಫಲಿತಾಂಶವನ್ನು ವೆ ಸರಾಯರ ಸೆಕ್ರೆಟರಿಯವರಿಗೂ, ಮದ್ರಾಸು ಸರಕಾರಕ್ಕೂ ಕಳುಹಿಸಿದ್ದಾರೆ. ಪಟೇಲರ ಸ್ಥಿತಿಯೂ ವ್ಯಾಕುಲವನ್ನುಂಟುಮಾಡುವುದಾಗಿಯೂ ಒಡನೇ ಅವರಿಗೆ ತಕ್ಕ ರೀತಿ ಶುಶ್ರೂಷೋಪಚಾರ ಮಾಡದಿದ್ದರೆ ಅಪಾಯ ಬರಬಹುದೆಂದೂ ಬರೆದಿರುತ್ತಾರೆ. ವೈಸರಾಯ ಸರಕಾರದವರು ಅವರನ್ನು ಜಡನೇ ಬಿಡುಬಹುದೆಂದು ಊಹಿಸಲಾಗಿದೆ.

ಪಂಡಿತ ಮೋತಿಲಾಲರೊಡನೆ ಜೈಲಿಗೆ ಹೋದ ಡಾಕ್ಟರ್ ಮಹಮ್ಮದ್‌ರವರು ಈಗ ತಾನೇ ಬಿಡುಬ್ಬಿರುವರು. ಪಂಡಿತ ಜವಾಹರಲಾಲರು ಅವರಲ್ಲಿ ಹಿಂದೂದೇಶಕ್ಕೆ ಕಳುಹಿಸಿರುವ ಸಂದೇಶವೇನೆಂದರೆ "ಎಲ್ಲರೂ ಧೈರ್ಯದಿಂದ ಈ ತರದ ತ್ಯಾಗ ಮಾಡಿದ್ದಕ್ಕೆ ಅಭಿನಂದಿಸುತ್ತೇನೆ. ಆದರಲ್ಲಿಯೂ ಸ್ತ್ರೀಯರು ನಡೆಸಿತ್ತಿರುವ ಕಾರ್ಯಗಳು ವಿಶೇಷವಾಗಿವೆ. ಧೈರ್ಯದಿಂದಲೂ, ಆತ್ಮವಿಶ್ವಾಸದಿಂದಲೂ ಈ ಚಳವಳಿಯನ್ನು ನಡಿಸಿದರೆ ಜಯವು ನಿಶ್ಚಯವಾಗಿ ಸಿಕ್ಕುವುದು."

ವಿದೇಶ.

ರೌಂಡ್‌ಟೇಬಲ್ ಕಾನ್‌ಫರೆನ್ಸ್.

ಬಾಟುವಾರ್ ಚಚಿನಿಸ ಕವಶೀಲ್ ರಿಪೋರ್ಟು ಕೊಡಲಿಕ್ಕಾಗಿ ಅನೇಕ ಉಪಕಮಿಟಿಗಳನ್ನು ಮಾಡಿದ್ದರ ಕೆಲಸವು ಪೂರ್ಣಸೇರಿಕ್ಕಾಗಿಸೆ. ಸಂಯುಕ್ತ ಸಂಸ್ಥೆಯಲ್ಲಿ ದೇಶಿಯ ರಾಜರ ಪ್ರತಿನಿಧಿಗಳ ಸಂಖ್ಯೆಹಕ್ಕುಬಾಧ್ಯತೆಗಳು ಯಾವ ರೀತಿಯಲ್ಲಿರಬೇಕೆಂಬ ವಿಷಯವು ಇನ್ನೂ ವಿಲೇವಾರಿಗೆ ಬಂದಿರುವುದಿಲ್ಲ. ಫೆಡರಲ್ ಸಂಸ್ಥೆಯ ಎರಡು ಸಭೆಗಳಲ್ಲಿಯೂ ಆಶ್ರಿತ ರಾಜ್ಯಗಳ ಪ್ರತಿನಿಧಿಗಳು ಸಂತೆ ತೀರ್ಮಾನವಾಗಿದೆ. ಹಿಂದೂ ಮುಸಲ್ಮಾನರ ಜಗಳಗಳು ಇನ್ನೂ ತೀರಿಲ್ಲ. ಅಧಿಕಾರವು ಯಾವ ರೀತಿಯಲ್ಲಿರಬೇಕೆಂಬ ಚರ್ಚೆಯಲ್ಲೇ ಇದ್ದಾರೆ. ಮುಸಲ್ಮಾನರು ಕೇಳಿದ್ದೆಲ್ಲಾ ಸಿಕ್ಕಬೇಕೆಂದು ಹಟ ಹಿಡಿದಿದ್ದಾರೆ. ಅವರಿಗೇನೇ ಪ್ರತ್ಯೇಕವಾದ ಜನಾಂಗವೆಯು ಆಗಬೇಕೆಂಬ ಹೊರಟಿದ್ದಾರೆ. ತರುಣ ಪುಂಗವಕ್ಕೆ ಸೇರಿದ ಎಶ್ಟಾ ಮುಸಲ್ಮಾನರೂ ಜುಟ್ಟು ಜನಾಂಗಕ್ಕೆ ಆಗಬೇಕೆಂದು ತುತ್ತ ಕಳುಹಿಸುವುದಲ್ಲಿದ್ದಾರೆ. ಸೌಟ್ಸ್‌ಲ್ ಸರಕಾರದಲ್ಲಿಯೂ ಜವಾಬುದಾರಿ ಸರಕಾರ ಕೊಡಬೇಕಂತ ತೀರ್ಮಾನವಾಗಿದೆಯಂತೆ ಆದರೆ ಹೇಗೆಂಬುದು ತಿಳಿಯಿಲ್ಲ. ಇಂಡಿಯಾ ಸರಕಾರವಿಂದ ಇಂಗ್ಲೆಂಡಿಗೆ ಜವಾಬುದಾರಿ ಸರಕಾರ ಕೊಡಬೇಕು ಇಲ್ಲವಾದರೆ ವರ್ತಿಯಲ್ ಆಗಿ ಕೊಡಿ ಎಂದು ತಂತಿ ಬಂದಿದೆಯಂತೆ.

ಬರ್ಮಾ ದೇಶವನ್ನು ಪ್ರತ್ಯೇಕವಿತಿಲಿಕ್ಕೆ ಎಲ್ಲರೂ ಒಪ್ಪಿದ್ದಾರೆ. ಸ್ತ್ರೀಯರಿಗೆ ಹೆಚ್ಚಿನ ಓಟುಗಳನ್ನು ಕೊಡುವ ತಕ್ಕು ಕೊಡಬಲಾಗುತ್ತೆ. ಪುರುಷ ಓಟುಗುಗಳ ಪಕ್ಕಿಯನ್ನರೆಲ್ಲರೂ ಒಟಿಗೆ ಅರ್ಹತೆಯುಳ್ಳವರಾಗಿರುತ್ತಾರೆ. ಕೂಲಿ ಪಕ್ಷದವರು ಓಟುಗಳನ್ನು ಆಸ್ತಿ ಇರುವವರ ಸಂಖ್ಯೆಯ ಬೇಲೆ ವಿಲೆವಾರಿ ಮೂಡ ಕೊಡಬೆಂದೂ, ಮೆಜಾರಿಟಿಗೆ ಬಂಡವರಿಗೆಲ್ಲಾ ಓಟು ಸಿಕ್ಕುಬೇಕೆಂದೂ ವಾದಿಸುತ್ತಿದ್ದಾರೆ. ಡೆಲಿಗೇಟರುಗಳ ಪೈಕಿ ಒಬ್ಬರಾದ ಜಿನಾಮಣಿಯವರು ಸಾರ್ಲಿಮೆಂಟುಗಳ ಪೈಕಿ ಕೆಲವರನ್ನು ಸೇರಿಸಿ ಮೂಡಿದ ಒಂದು ವಿಟಿಯಿನಿಲ್ಲಿ ಸ್ವೆತ ತ್ವದ ಮುಖ್ಯಾಂತಗಳನ್ನು ಕೊಡದೆ ಇವ್ವರೆ ಹದಿನಾರು ಲಿಬರಲ್ ಪಕ್ಷದ ಡೆಲಿಗೇಟರುಗಳು ಇಂಡಿಯಕ್ಕೆ ವಾಪಸು ಹೊರಡುತ್ತಾರೆಂದು ಹೇಳಿರುವರು. ಹೇಗೂ ಜನವರಿ 15ನೇಳಿಗೆ ಎಶ್ಟಾ ಸಂಗತಿಯು ವ್ಯವಸ್ಥೆಗೆ ಬರುವುದು.

ಡೆನ್ಮಾರ್ಕದಲ್ಲಿ ಮೆರಿಹಫ್ ಜ್ವಾಲಾಮುಖಿಯು ದಿಢೀರನೆ ಸಲವತ್ತು ಹಳ್ಳಿಗಳು ನಾಶವಾಗಿ ಎಂಟುನೂರು ಜನರಿಗಿಂತ ಹೆಚ್ಚು ಜನರು ಸಾವಿರಾರು ದನಕರುಗಳು ನಾಶವಾಗಿವೆ

ಕುರ್ಕಿಸ್ತಾನದಲ್ಲಿ ಅಲ್ಲಲ್ಲಿ ದಂಗೆಗಳಿಗೆ ಸುರುವಾಗಿದೆ. ಬಲೀಸರ ರಾಜ್ಯವನ್ನು ಪುನಃ ಸ್ಥಾಪನೆ ಮಾಡಬೇಕೆಂತ ಒಂದು ಪಂಗಡದವರು ಹೇಳಿದ್ದಾರೆ. ಬೆಶಾಪತನ ಮೆಂಬರ್‌ಗೆ ರುನ್ನು ಪೋಲೀಸಿನವರು ಅಡ್ಡಗಟ್ಟಿದಲ್ಲಿ ಜಗಳವಾಗಿ ಅನೇಕರಿಗೆ ಗಾಯಗಳಾಗಿವೆ.

ಬ್ರಿಟಿಷ್ ಸರಕಾರಕ್ಕೆ ಸಾಲವು ಮೂರು ಟ್ರಿಲಿಯನ್ ರೂಪಾಯಿಗಳಿಗೆಯೆಂದು ಪಾರ್ಲಿಮೆಂಟಿನಲ್ಲಿ ಒಬ್ಬ ಮೆಂಬರು ಕೇಳಿದ ಪ್ರಶ್ನೆಗೆ ಉತ್ತರಿಸಿಕೊಟ್ಟಿರುವರು. ಇಂದರೆ ಒಟ್ಟು ಸಾಲವು ಸುಮಾರು ಸಾವಿರಕೋಟಿ ರೂಪಾಯಿಗಳಿಂದರ್ಥವಾಯಿತು.

ಹಿಂದೀ ಮುಖಂಡರು ಇಂಗ್ಲೆಂಡಿನಲ್ಲಿ ಪ್ರಧಾನ ಮಂತ್ರಿಯವರೊಂದಿಗೆ ರಾಜಕೀಯ ಕೈದಿಗಳನ್ನು ಬಿಡ ಮಂತೆಯೂ, ಜವಾಬುದಾರಿಯ ಸ್ವರಾಜ್ಯವನ್ನು ಕೊಡಲೇ ಕೊಡಬೇಕೆಂದೂ ಎಷ್ಟು ಆತುರಂಗದಲ್ಲಿ ಬೇಡಿಕೊಂಡರೂ ಅವರು ಒಪ್ಪಲಿಲ್ಲ ವಂತೆ.

ಅಕ್ಷರ್ಯ ಸಂಗತಿ!

ಭೂಲೋಕವಲ್ಲಿ ಜೀವಿತರಾಗಿರುವ ನೈಗ್ರರು.

ನ್ಯೂಯಾರ್ಕ್ ಪಟ್ಟಣಕ್ಕೆ ಹೋಗಿದ್ದ ಟರ್ಕಿ ದೇಶವಾಸಿಯೊಬ್ಬನು ತನಗೆ 158 ವರ್ಷಗಳಾಗಿದೆಯೆಂತು ಹೇಳಿ ಅವನು ಹುಟ್ಟಿದ ಸರ್ಟಿಫಿಕೇಟನ್ನು ಸಹ ಹಾಜರು ಪಡಿಸಿದನು. ಜೈನಾದ ಅಜಾಗೆಯು ಎಂಬವರಿಗೆ 250 ವರ್ಷಗಳಾಗಿನೆಯಂತೆ. ಇಟಲಿಯಲ್ಲಿ 122 ವರ್ಷದ ಒಬ್ಬನೂ 121 ವರ್ಷದ ಒಬ್ಬಳೂ ಇದ್ದಾರೆ.

ಬಲ್ಗೇರಿಯಾ ದೇಶದಲ್ಲಿ 100 ವರ್ಷಕ್ಕಿಂತ ಏರಿದ ಜನರು 3,139 ಇದ್ದಾರೆ.

ಬ್ರಿಟನ್ನಿನಲ್ಲಿ 145 ಜನರು ಇದ್ದಾರೆ.

ಸ್ಪೇಯಿನ್ ದೇಶದಲ್ಲಿ 335 ಜನರು ಇದ್ದಾರೆ.

ಪೆರ್ಲೇಂಡಿನಲ್ಲಿ 116 ಜನರಿರುವರು.

ಬಲ್ಗೇರಿಯದ ಜನರು ಹೆಚ್ಚಾಗಿ ಕರಕಾರಿ, ಹಾಲು, ಗಿಣ್ಣು, ರೊಟ್ಟಿ ಮತ್ತು ಹಣ್ಣುಗಳಿಂದಲೇ ಜೀವನ ನೊಡುವರಾಗಿ ಇದ್ದಾರೆ. ಆದ್ದರಿಂದ ಅಲ್ಲಿ ಹೆಚ್ಚಾದ ಜನರು ದೀರ್ಘಕಾಲ ಬದ ಕುತ್ತಿದ್ದಾರೆ. ಅಲ್ಲಿ ಮೇಲೆ ಹೇಳಿದಂತೆ ಜೀವಿತರಾಗಿರುವ 3,139 ಜನರ ಪೈಕಿ 14 ಜನರು ಮಾತ್ರ ಡಾಕ್ಟರುಗಳನ್ನು ನೋಡುವವರಾಗಿರುತ್ತಾರೆ ಹೆಚ್ಚು ಕಾಲ ಬದುಕಬೇಕೆಂದು ಇವರು ಅದಷ್ಟು ಮಾಂಸಾಹಾರವನ್ನು ತ್ಯಜಿಸಿ ಬೇಕಂಬುದು ಇದರಿಂದ ತಿಳಿಯುತ್ತೆ.

ಪಶ್ಚಾತ್ತಾಪವೇಹಾರ.

ಬಾತ್ಮಿದಾರರು ಪಡುವ ಅಧಿಕಾರ್ಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಶನಿವಾರ ಸಂತೆಯ ಸತ್ಕಾರ ಕೂಟ.

ತಾ. 21—12—30ನೇ ಆದಿತ್ಯವಾರದ ದಿವಸ ಶನಿವಾರಸಂತೆ ಶ್ರೀಕಂಠೇಶ್ವರ ರೈಸಾಮಿಲ್ ಒಳ ಉತ್ತರ ಕೊಡಗು ಮಹಜನೇಯರು ಸೇರಿ ಮೆ. ರಾ. ಕೆ. ಮಲ್ಲಪ್ಪನವರು ಬಿ. ಎ ಬಿ. ಯಲ್. ಪರೀಕ್ಷೆಯಲ್ಲಿ ತೇರ್ಗಡೆಯೊದ ಪ್ರಯುಕ್ತ ವೈಭವದಿಂದ ದೇಶದ ಹಾಸನ ಡಿಸ್ಟ್ರಿಕ್ಟ್ ಎಕನಾಮಿಕ್ ಸೊಸಿರಿಂಟೆಂಡೆಂಟ್ ಮೆ. ರಾ. ಹೆಚ್ ಕೆ. ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸುತೋಷ ಕೂಟವನ್ನು ಏರ್ಪಡಿಸಿದ್ದರು. ಆ ಸಭೆಯಲ್ಲಿ ಸುಮಾರು ಕೊಡಗು ದೇಶವಾದಲೂ ಮೈಸೂರು ದೇಶದಿಂದಲೂ 50ರ ವರೆಗೆ ಜನರು ನೆರೆದಿದ್ದರು. ಮೆ. ರಾ. ಕೆ. ಮಲ್ಲಪ್ಪನವರು ಕೋಮುವಾರು ವೈದ್ಯಸ್ಯಗಳಿಂದಾರವಾಗಿ ಉಪನ್ಯಾಸ ಮಾಡಿದರು. ಕೊಡ್ಲಿ ಕಲ್ಲುಮಠದ ಶ್ರೀಗಳವರು "ಜ್ಞಾನ" ಎಂಬುದರ ವಿಷಯ ಭಾಷಣವನ್ನೂ, ಅಧ್ಯಕ್ಷರು ವಿದ್ಯೆ ಮತ್ತು ಆಗ್ಯಟ್ಟಿನ ಬಲ ಇನೇ ಮುಂತಾದ

ಲ್ಲ' ಎಂಬದಾಗಿ ಹೇಳಿಬಿಟ್ಟರು. ಬ್ರಿಟಿಷರಿದನ್ನು ಮೂಡಿದರು. ಹಾಗೆ ಬಿಡುಗಡೆ ಹೊಂದಿದವರಲ್ಲಿ ಮಿ. ಸೀನ್‌ಮೆಕಿಯನ್ ಎಂಬುವನೂ ಒಬ್ಬ. ಗಲ್ಲುಮರವನ್ನೇರಲು ಕಾರಾಗೃಹದಲ್ಲಿ ಕಾದಿದ್ದ ಬಡನಾಯಿ! ಬಿಡುಗಡೆ ಹೊಂದಿ ಸಂಧಾನ ನಡೆಸಲು ಸ್ವತಿನಿಧಿಯಾಗಿ ಬಂದ ಬಂದವರಲ್ಲಿ ಮುಖ್ಯನೆನಿಸಿದ ಅನಂತರ ಸ್ವತಂತ್ರ ಐರ್ಲಂಡಿನ ಸಚಿವರಲ್ಲೊಬ್ಬನಾದ!

ಮೊದಲು ಕಾಜಕೇಯ ಬಂದಿಗಳ ಬಿಡುಗಡೆಯಾಗುವವರೆಗೂ ತೃಪ್ತಿಕರವೆನಿಸುವ ಸಂಧಾನವೆಳೆಸ್ಪೂ ನತೆಯುದಿಲ್ಲವೆಂಬುದು ನನಗೆ ಮನವರಿಕೆಯಾಗಿದೆ ಆ ಬಂದಿಗಳ ಪರವಾಗಿ ತಮ್ಮಲ್ಲಿ ನಾನು ಈ ವಿಜ್ಞಾಪನೆ ಮಾಡಿಕೊಂಡಿರುತ್ತೇನೆ

(ವಿಶ್ವಕರ್ಣಾಟಕದಿಂದ) ಗ್ವಿನೆತ್ ಫಾಡೆನ್'

ಮೊರಾಟಕ್ಕಿದೆ.

ಅಮ್ಮತ್ತಿನಾಡು ಹೊಸೂರು ಗ್ರಾಮದ ಮಿ. ಪೊನ್ನಕಚ್ಚರ ಲೇಟ್ ಗಣಪತಿಯವರ ಕಾವೇರಿಕಾಡಿನಲ್ಲಿರುವ 32 ವಿಘ ಭೂಮಿ, ಅಂದಾಜು 51 ಎಕರು ಬಾಣೆ ಜಾಗ ಸಹಿತ ಮೊರಾಟಕ್ಕಿದೆ ಭೂಮಿಯ ಪೈಕಿ 27 ಎಕರು ಸಾಗುವಳಿಯಲ್ಲಿದೆ. ನೀರಿನ ಸೆಲವಿರುವುದು ಕಾಲುವೆ ಮೂಲಕ ಯಾವ ಕಾಲದಲ್ಲೂ ಹೊರಬಿಡುತ್ತೆ. ಬೆಲೆ ಅಂದಾಜು 10,000 ರೂ ವಾಯಿ ಒಳಗೆ ಆಗುವುದು. ಕಾಫಿಯಾ ತಾರರು ಈ ಕೆಳಗಿನ ಅತ್ತೆಸಿನವರಿಗೆ ಪತ್ರವ್ಯವಹಾರ ನಡಿಸಿ ತಪಶೀಲ್ ತಿಳಿಸಿಕೊಳ್ಳಬಹುದು.

ಜಮ್ಮಡ ಮೂದಪ್ಪ, ಕೈಕೇರಿ ಗ್ರಾಮ, ಗೋಣಿಕೊಪ್ಪಲು — or — ಪೊನ್ನಕಚ್ಚರ ಬೆಳ್ಳಪ್ಪ, ಮರ್ಚೆಂಟ್, ವೀರಾಜಪೇಟೆ

4—3

CIVIL SURGEON'S OFFICE, COORG
Mercara, dated the 4th December 1930.

NOTICE.

Sealed tenders will be received at the Civil Surgeon's Office, Mercara up to 11 A M on Friday the 16th January 1931, for the supply by contract of all articles of diet, etc, required separately for the use of the in-patients of (1) Mercara, (2) Virajpet and (3) Somwarpet Hospitals from 1st April 1931 to 31st March 1932 (both days inclusive)

For further particulars apply to the Medical Officer in charge of the Hospitals concerned.

F R Thornton
Major, I. M. S,
2—2 Civil Surgeon, Coorg.

ಕೊಡಗು ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ, ತಾ. 4—12—30.

ನೋಟೀಸು.

(1) ಮಡಿಕೇರಿ, (2) ವೀರಾಜಪೇಟೆ ಮತ್ತು (3) ಸೋಮವಾರಪೇಟೆ ಆಸ್ಪತ್ರೆಗಳಲ್ಲಿರುವ ಕಾಯಿಲೆಷ್ಟರ ಉಪಯೋಗಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಕಂಟ್ರಾಕ್ಟು ಮೂಲಕ 1931 ನೇ ಇಸವಿ ಏಪ್ರಿಲ್ 1ರಿಂದ 1932 ನೇ ಇಸವಿ ಮಾರ್ಚ್ 31ರ ವರೆಗೆ (ಈ ಎರಡು ದಿವಸಗಳೂ ಸೇರಿ) ಆಸ್ಪತ್ರೆಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಒದಗಿಸಿ ಕೊಡಲು ಮುದ್ರೆ ಹಾಕಿದ ದರಖಾಸ್ತುಗಳು (ಟೆಂಡರ್ಸ್) 1931ನೇ ಇಸವಿ ಜನವರಿ ತಾ. 16ನೇ ಶುಕ್ರವಾರ ಬೆಳಿಗ್ಗೆ 11 ಗಂಟೆ ವರೆಗೆ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ ತೆಗೆದುಕೊಳ್ಳಲಾಗುವವು

ಹೆಚ್ಚಿನ ಮಾಹಿತಿಗೆ ಸಂಬಂಧಪಟ್ಟ ಆಸ್ಪತ್ರೆಗಳ ಚಾರ್ಜಿನಲ್ಲಿರುವ ಮೆಡಿಕಲ್ ಆಫೀಸರಿಗೆ ಬರಕೊಳ್ಳುವುದು

ಎಫ್. ಆರ್. ಥಾರ್ನ್‌ಟನ್,
ಮೇಜರ್, ಐ ಯಂ ಯಸ್,
2—2 ಸಿವಿಲ್ ಸರ್ಜನರು, ಕೊಡಗು

ಪ್ರಕಟಣೆ.

1931ನೇ ಇಸವಿ ಕೊಡಗು ಕ್ಯಾಲೆಂಡರು.

ಕೊಡಗು ದೇಶದ ಲೀಡಿಯುಗಳ ಫೋಟೋಗಳಿಂದ ಅಲಂಕೃತವಾದ ಈ ಕ್ಯಾಲೆಂಡರು ಒನವರಿ ತಾ. 1 ರಿಂದ ಈ ಕೆಳಗಿನ ವಿಳಾಸದಲ್ಲಿ ದೊರೆಯುವುದು. ಇದರಲ್ಲಿ ಕೊಡಗು ದೇಶದ 7 ಫೋಟೋಗಳೂ ಎರಡು ಗ್ರೂಪ್ ಫೋಟೋಗಳೂ, ತಿಂಗಳಿಗೊಮ್ಮೆ ಹರಿಯುವ ತಾರೀಖು ಪಟ್ಟಿಗಳೂ ಸೊಗಸಾಗಿ ಇರಿಸಲ್ಪಟ್ಟಿವೆ ದೇಶ ಪ್ರಿಯರಿಗೆ ಇದೊಂದು ಅಮೂಲ್ಯವಾದ ಸಮಯವೇ ಸರೀ.

ಕೊಡಗಿನ ಪ್ರತಿಯೊಂದು ಕಡೆಯಲ್ಲಿಯೂ ಏಜಂಟರು ಬೇಕಾಗಿವೆ ಬೇರೆ ಸಂಗತಿಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರು.
ಮುಬಾರಕ್ & ಕೋ,
4—2 ಜಾಕೆ, ಮಡಿಕೇರಿ.

ಮಡಿಕೇರಿ ಮುನಿಸಿಪಲ್ ಸೈಸಿಡೆಂಟರವರ ಆಫೀಸಿನಿಂದ.

ಮಡಿಕೇರಿ ಮುನಿಸಿಪಾಲಿಟಿಯಲ್ಲಿ ಇಮತ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ.—

ಹಾಲಿ ವರ್ಷದ ಮಡಿಕೇರಿ ಮುನಿಸಿಪಾಲಿಟಿಯಲ್ಲಿ ಇರುವ ಮನೆಗಳ ಕಂದಾಯವನ್ನು ಸಬ್ ಕಮಿಟಿ ಮೆಂಬರುಗಳು ಒದಲಾವಣೆ ಮಾಡಿ ಪಟ್ಟಿ ತಯಾರಿ ಕೊಟ್ಟಿರುವುದನ್ನು ಮುನಿಸಿಪಲ್ ಆಫೀಸಿನಲ್ಲಿ ಇಡಲ್ಪಟ್ಟಿದೆ ಈ ಪಟ್ಟಿಯನ್ನು ಎಲ್ಲಾ ಜನರು ನೋಡಿಕೊಂಡು ಅವರು ವಿಧಿಸಿರಂತ ಕಂದಾಯದ ಮೇಲೆ ತಕರಾರು ಇದ್ದಲ್ಲಿ ಅಂಥಾ ತಕರಾರು ಅರ್ಜಿಗಳನ್ನು ಈ ಆಫೀಸಿನಲ್ಲಿ 1930ನೇ ಇಸವಿ ಡಿಸಂಬರು 31ರ ಒಳಗೆ ಪ್ರೆಸಿಡೆಂಟರವರಿಗೆ ಬರೆದು ಕಳುಹಿಸುವುದು ತಪ್ಪಿದರೆ ಅನಂತರ ಬರುವ ತಕರಾರು ಅರ್ಜಿಗಳನ್ನು ಅಂಗೀಕರಿಸಲಿಕ್ಕಿಲ್ಲ ಸಾದ ಸಂಗತಿ ಈ ಮುಖಾಂತರ ಬಹಿರಂಗ ಪಡಿಸಿದೆ.

ತಾ. 25—11—30, ಪಿ. ದೇವೈಯ್ಯ,
3—3 (ಪ್ರೆಸಿಡೆಂಟ್,)

COORG CIVIL SURGEON'S OFFICE,
Mercara, dated the 4th December 1930

NOTICE.

Sealed tenders for the hiring out of calves to the Vaccine Depot at Mercara for one year commencing from 1st April 1931 to 31st March 1932 will be received at the Civil Surgeon's Office, Mercara up to 11. A M on Friday the 16th January 1931

For terms and other particulars apply to the Vaccine Inspector or the Civil Surgeon's Office at Mercara

F R. Thornton.
Major, I M. S,
Civil Surgeon, Coorg

ಕೊಡಗು ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ, ತಾ 1—12—30.

ನೋಟೀಸು.

1931ನೇ ಎಪ್ರಿಲ್ 1ರಿಂದ 1932ನೇ ಮಾರ್ಚ್ 31ರ ವರೆಗೆ ಒಂದು ವರ್ಷ ಮಡಿಕೇರಿ ನೇಕ್ಡೈನ್ ಇಶಾಖೆಗೆ ಕೆಂಗಳನ್ನು ಕೊಡುಗೆ ಕೊಡಲು ಮುದ್ರೆ ಹಾಕಿದ ದರಖಾಸ್ತುಗಳು (ಟೆಂಡರ್ಸ್) ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ 1931ನೇ ಜನವರಿ 16ನೇ ಶುಕ್ರವಾರ ಬೆಳಿಗ್ಗೆ 11—30 ಗಂಟೆ ವರೆಗೆ ತೆಗೆದುಕೊಳ್ಳಲಾಗುವವು

ಶರತ್ತುಗಳಿಗೆ ಮತ್ತು ಇತರ ವಿವರಗಳಿಗೆ ನೇಕ್ಡೈನ್ ಇನ್‌ಸ್ಪೆಕ್ಟರಿಗೆ ಅಥವಾ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿಗೆ ಬರೆದುಕೊಳ್ಳುವುದು.

ಎಫ್. ಆರ್. ಥಾರ್ನ್‌ಟನ್,
ಮೇಜರ್, ಐ ಯಂ. ಎಸ್.,
2—2 ಸಿವಿಲ್ ಸರ್ಜನರ, ಕೊಡಗು.

ಟೈಪ್‌ರೈಟಿಂಗ ಶಿಕ್ಷಣ.

ದಿ ಕರ್ನಾಟಕ ಟೈಲರಿಂಗ ಮತ್ತು ಕಟಿಂಗ ಕಾಲೇಜು ಧಾರವಾಡ ಮಾರ್ಕೆಟ್.

ನಾವು ಬೇತಿ ಮತ್ತು ಇಂಗ್ಲೀಷ ಸಿದ್ಧತಿಯಂತೆ ಕಟಿಂಗ ಅಂದರೆ ಅಂಗಿ ಕತ್ತರಿಸುವ ಮತ್ತು ಟೈಲರಿಂಗ ಅಂದರೆ ಅವಿ ಹೊಲಿಯುವ ಸಕಾಸ್ಯಶಿಕ್ಷಣ ಕೊಡುತ್ತೇವೆ. ಫಕ್ಕ ತಟಿಂಗ ಮುಡತ ಎರಡು ತಿಂಗಳ ಮತ್ತು ಟೈಲರಿಂಗ ಮುಡತ ಮೂರು ತಿಂಗಳ ಈ ಪ್ರಕಾರ ಎರಡು ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ಕ ಕಟಿಂಗ ಫೀ ೫೫ (ಎಪತ್ತೈದು) ರೂವಾಯಿ ಮತ್ತ ಟೈಲರಿಂಗ ಫೀ ೧೫೫ (ಹದಿನೈದು) ರೂವಾಯಿ. ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ದೇಶಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ಕನಿಷ್ಠ ಅರವತ್ತು ರೂವಾಯಿ ಗಳಿಸಬಲ್ಲನು. ವಿಶೆಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸನಮ್ಮನ್ನೂ ಅಥವಾ ಒಂದು ಆಣೆ ಪೋಸ್ಟ್ ಟಿಕೀಟು ಕಳುಹಿಸಬೇಕು

ಅರ್. ಬಿ. ಮುಧೋಳಕರ,
ಪ್ರಿನ್ಸಿಪಾಲ್ ಡಿಪ್ಲೋಮಿಸ್ಟ್ ಪ್ರಿನ್ಸಿಪಾಲ, ಧಾರವಾಡ.

52—23

ತಿಂಗಳೆ

ಇವರ

ಬಿಲಿಯಮ್ಸ್.

ನನ್ನ
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪನಿ,
52—52 ಗಿರಿಗಾಂವ, ಮುಂಬಯಿ.

ನೋಟೀಸು.

ದಕ್ಷಿಣ ಕೊಡಗು ತಾಲೂಕು ನಾಪೋಕ್ಲು ನಾಡು ಬೀತು ಗ್ರಾಮದಲ್ಲಿ ಸನ್ನ ಹೆಸರಿನಲ್ಲಿ ಒರೂಬಾಂದಿ ನಡಿಯು ಬರುವ ಬಾಗದಲ್ಲಿ ಕಟ್ಟಿದ ಹಂಚಿನ ಮನೆಯನ್ನು ಉದಿಯಂಡ ಗಣಪತಿಯವರು ಮೂರಲು ಸ್ವಯತ್ನ ಪಡಿಸಿರಾಗಿ ತಿಳಿಯಿಸ್ಕೇನೆ ಈ ಮನೆಯನ್ನು ಯಾರೊಬ್ಬರೂ ಪಡಕೊಳ್ಳ ಕೂಡದು. ಹಾಗೆ ಪಡಕೊಂಡಲ್ಲಿ ಅದರಿಂದ ಉಂಟಾಗುವ ನೆರ್ವ ನಷ್ಟಕ್ಕೆ, ಕಷ್ಟಕ್ಕೆ ಗುರಿಯಾಗಬೇಕಾಗಿ ಈ ಮೂಲಕ ತಿಳಿಸಿದೆ

4—2 ಉದಿಯಂಡ ಅಯ್ಯಮ್ಮ.

ಸೆಂಟ್ರಲ್ ಬ್ಯಾಂಕು ವಿಂಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ವಿಂಟಿಂಗು ಕಳೆದ ತಾ 27 ರಲ್ಲು ನಡೆಯಿತು ರಾ. ಬಾ. ಕ ಅಪ್ಪಯ್ಯನವರು ಅಧ್ಯಕ್ಷರಾಗಿದ್ದರು. 5 ಡೈರೆಕ್ಟರುಗಳು ಹಾಜರಿದ್ದರಲ್ಲದೆ ಕೋ-ಆಪರೇಟಿವ್ ಸೊಸಾಯಿಟಿಗಳ ರಿಜಿಸ್ಟ್ರಾರವರೂ ಹಾಜರಿದ್ದರು.

1. ಕಳೆದ ವಿಂಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2. ನವಂಬರ್ ತಿಂಗಳ ಲೆಕ್ಕ ಓದಿ ಮಂಜೂರಾತ್ಮಾಡಲಾಯಿತು.

3. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು (1) ಅಮ್ಮತ್ತಿ ಟೌನ್ ಸೊಸೈಟಿಗೆ ರೂ. 300 (2) ಹಾರಂಗಿ ಸೊಸೈಟಿಗೆ ರೂ. 500 ಮತ್ತು ಪೊನ್ನಂಪೇಟೆ ಸೊಸೈಟಿಗೆ ರೂ 3000

4 ನೀರುಗುಂದ ಸೊಸೈಟಿ, ಹುದಿಕೇರಿ ಟೌನ್ ಸೊಸೈಟಿ, ಸೋಮವಾರಪೇಟೆ ಸೆಂಟ್ರಲ್, ಹೊಸೂರು ಸೊಸೈಟಿ ಮತ್ತು ತಿತಿಮತಿ ಸೊಸೈಟಿ ಈ ಮೇಲ್ಕಂಡ 5 ಸೊಸೈಟಿಗಳ ಸಾಲದ ಅರ್ಜಿಗಳನ್ನು ಹಣವಿಲ್ಲದ ಮತ್ತು ಇತರ ಕಾರಣಗಳಿಂದ ಮಂಜೂರಾತ್ಮಾಡಲಿಲ್ಲ

5 ಡೈರೆಕ್ಟರ್‌ಗಳ ಕರಡು ರಿಪೋರ್ಟು ಓದಿ ಮಂಜೂರಾತ್ಮಾಡಲಾಯಿತು.

6 ರಿಜಿಸ್ಟ್ರಾರವು ಕ್ಷೇಮನಿಧಿಯ ಹಣದ ಪೈಕಿ ಶೇಕಡ 25 ರಷ್ಟು ಗವರ್ನ್‌ಮೆಂಟ್ ಪ್ರೋನೋಟಿನಲ್ಲಾಗಲಿ, ಇಲ್ಲವೇ ಪೋಸ್ಟಲ್ ಕ್ಯಾಷ್ ಸರ್ಟೀಫ್ ಕೇಟ್‌ನಲ್ಲಾಗಲಿ ಇನ್‌ವೆಸ್ಟ್ ಮಾಡಿ ಸದರಿ ಸರ್ಟೀಫ್ ಕೇಟನ್ನು ಗವರ್ನ್‌ಮೆಂಟ್ ಪ್ರಿಜಿಯಲ್ಲಿ ಡಿವಾಜಿಟ್ಟಾಗಿ ಇಡಬೇಕೆಂತ ತೀರ್ಮಾನವಾಯಿತು.

ಕೆ. ಅಪ್ಪಯ್ಯ,
(ಅಧ್ಯಕ್ಷರು)

೪ ಭಾಗ.

ಹಿಂದೂದೇಶದ ವಿದ್ಯೆಯನ್ನು ಕುರಿತು.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

ಆರ್ಯರಲ್ಲಿ ಪ್ರಚಾರದಲ್ಲಿದ್ದ ವಿದ್ಯಾಭ್ಯಾಸ ಕ್ರಮವು ವರ್ಣಾಶ್ರಮ ಧರ್ಮದ ಬೆಳವಣಿಗೆಗೆ ಅತ್ಯಂತ ಆವಶ್ಯಕವೂ, ಪ್ರೋತ್ಸಾಹ ಯುಕ್ತವಾದುದೂ ಆಗಿತ್ತು. ವರ್ಣಾಶ್ರಮ ಧರ್ಮವೆಂದರೆ ಈಗಿರುವಂತೆ ಉದ್ದೇಶ ರಹಿತವೂ, ವೀರ್ಯ ರಹಿತವೂ, ಸನ್ನೂಜದಲ್ಲಿ ಶಕ್ತಿ ರಹಿತವೂ ಆದ ವರ್ಣಾಶ್ರಮ ಧರ್ಮವಲ್ಲ. ಆರ್ಯರ ವರ್ಣಾಶ್ರಮ ಧರ್ಮದ ವ್ಯವಸ್ಥೆಯಲ್ಲಿ ಸಮಾಜ ಸೇವೆಗೂ, ಆರ್ಥಿಕ ಅಭಿವೃದ್ಧಿಗೂ, ದೇಶ ಉಚಿತವಾದ ಅಧಿಕಾರದಲ್ಲಿಯೂ ಮೇಲೇರಲು ಸರ್ವರಿಗೂ ಅವಕಾಶವಿದ್ದಿತು.

ಪ್ರಾಚೀನ ಹಿಂದುಸ್ಥಾನದಲ್ಲಿ ವಿದ್ಯಾಭ್ಯಾಸ ಪೆಟ್ಟುಬಿದ್ದಕ್ಕೆ ಬಹಳ ಓದುವುದು ಮತ್ತು ಬರೆಯುವುದರಿಂದ ಅರ್ಥವಿರಲಿಲ್ಲ. ಹಿಂದೂ ದೇಶದ ಸಂಸ್ಕೃತಿಯನ್ನು (Culture) ಬಹಳ ಓದಿ ನಿಂದಲೂ, ಬರಹದಿಂದಲೂ ಮಾತ್ರವೇ ಅಳೆಯುವುದಕ್ಕೆ ಆಗುವುದಿಲ್ಲ. ಬರೆಯುವುದು, ಓದುವುದು ಮಾತ್ರವೇ ವಿದ್ಯೆ ಎಂಬುದು ಪಾಶ್ಚಾತ್ಯರಿಂದ ಬಂದ ಭಾವನೆ ಇಂದಿನ ಹಿಂದು ಸ್ಥಾನದಲ್ಲಿ ಓದುವುದು ಬರೆಯುವದು ಬಾರದ ವಿದ್ಯಾವಂತರೇ ಕಡಿದ್ದಾರೆ. ಓದುವುದು ಬರೆಯುವುದು ಬರುವ ಅವಿದ್ಯಾವಂತರು ಅವರಿಗಿಂತ ಜೆಟ್ಟಾದ್ದಿದ್ದಾರೆ. ಪಾಶ್ಚಾತ್ಯರಿಂಗೆ ವಿದ್ಯೆ ಎಂದರೆ ಬರಿಯ ವ್ಯಾಸಂಗ ಮಾತ್ರವೆಂದೇ ಭಾವನೆ. ಹೈಸ್ಪೆನ್ಸರ್ ಪೆಟ್ರಿಕ್‌ಗಿಡ್ಸ್ ಎಂಬವರು ಪಾಶ್ಚಾತ್ಯರಲ್ಲಿ ಬಹ್ವೀಯ ಮೇಧಾವಿಗಳು. ಶಿಕ್ಷಣಶಾಸ್ತ್ರದಲ್ಲಿ ಪಂಡಿತರು. ಅವರು ಒಂದು ಕಡೆ ಹೀಗೆ ಹೇಳಿದ್ದಾರೆ.

'ಒಂದಾದ ಮೇಲೊಂದು ಗ್ರಂಥಗಳನ್ನು ಉರು ಹಾಕುವುದನ್ನೇ ಪಾಶ್ಚಾತ್ಯರು ವಿದ್ಯೆಯೆಂದು ತಿಳಿದು ಬಿಟ್ಟಿದ್ದಾರೆ. ಇಂತಹ ವಿದ್ಯಾಂಸರಿಗೆಲ್ಲಾ ವಿಶ್ವ ವಿದ್ಯಾಲಯಗಳ ಕಾರ್ಯಕ್ಷಮಗಳು ಚಾಕು ತೆಪ್ಪವೆ ಗೊತ್ತಿವೆ. ಇಂತಹ ವಿದ್ಯಾಂಸರೇ ನಮ್ಮ ಲಾಯರುಗಳು; ನ್ಯಾಯಾಧೀಶರು ಮತ್ತು ಸರ್ಕಾರದ ಅಧಿಕಾರಿಗಳು. ಇವರಿಗೆ ಸಾಹಿತ್ಯದಲ್ಲಿಯೂ, ವಿಜ್ಞಾನದಲ್ಲಿಯೂ ಲಲಿತ ಕಲೆಗಳಲ್ಲಿಯೂ ಕುಂಟಾಗಿರುವ ಹೊಸ ಸ್ಪರ್ಶವಿಲ್ಲ, ಬೆಳವಣಿಗೆಯೂ ಸ್ವಲ್ಪವೂ ಗೊತ್ತಿಲ್ಲ. ಕಾಲೇಜುಗಳಿಂದ ಒಂದನೆಂತರ ನಿನ್ಮ ಗ್ರಾಡುಯೇಟ್ಸು (Graduates)ಗಳೆಲ್ಲಾ ತಾವೇ ಹೊಸದಾಗಿ ವಿದ್ಯೆಯನ್ನು ಕಲಿಯಬೇಕಾಗಿದೆ. ನಿಮಗೆ ನಮ್ಮ ವಿದ್ಯೆಯು ಬೇಡ, ನಿಮ್ಮ ವಿದ್ಯೆಯನ್ನು ಲಲಿತ ಕಲೆಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಿರಿ.'

ಎಲ್ಲಾ ದೇಶದಲ್ಲಿಯೂ, ವಿದ್ಯಾ ಪ್ರಚಾರದ ಅಧಿಕಾರವು ಸರಕಾರದ ಅಧಿಕಾರದಿಂದ ಬೇರೆಯಾಗಿದೆ. ಇಂಗ್ಲೆಂಡಿನಲ್ಲಿ ಶಿಕ್ಷಣ ಶಾಲೆಯು ತನ್ನ ಶಕ್ತಿ ಮತ್ತು ಧ್ಯೇಯಗಳಿಗಾಗಿ ಸರಕಾರವನ್ನು ಅನುಸರಿಸ ಬೇಕಾಗಿಲ್ಲ. ಜರ್ಮನಿ ಮತ್ತು ಅಮೇರಿಕದಲ್ಲಿಯೂ ಹೀಗೆಯೇ ಶಿಕ್ಷಣ ಶಾಲೆಯೂ, ಶಿಕ್ಷಣ ಕ್ರಮವೂ ಸ್ವತಂತ್ರವಾಗಿವೆ ಯಾವ ಕಡೆ ಶಿಕ್ಷಣಕ್ಕೆ ಸರ್ಕಾರದ ಮೇಲಿನ ವಿಚಾರಣೆ ಇಲ್ಲವೋ, ಸರಕಾರದವರ ಪ್ರಸನ್ನತೆ ಮತ್ತು ಕೋಪದ ಮೇಲೆ ಅದು ಅವಲಂಬಿಸ ಬೇಕಾದುದಿಲ್ಲವೋ, ಯಾವ ರಾಷ್ಟ್ರದಲ್ಲಿ ಪ್ರಜಾ ಪ್ರಮುಖರು ನಿರ್ಭೀತಿಯಿಂದ ಪ್ರಜಾ ಸ್ವಾತಂತ್ರ್ಯ ಸಾಧಕವಾದ ವಿದ್ಯೆಯನ್ನು ಜನರಿಗೆ ಬೋಧಿಸುತ್ತಿರುವರೋ, ಆ ಕ್ರಮವು ಮಾತ್ರ ನಿಜವಾದ ಶಿಕ್ಷಣ ಕ್ರಮವೆನ್ನಿಸಿಕೊಳ್ಳುತ್ತದೆ. ಉಳಿದುದಾವುದೂ ವಿದ್ಯೆಯೆನ್ನಿಸಿಕೊಳ್ಳುವುದಿಲ್ಲ. ಆದು ಪರ್ಯಾಪ್ತ ಪ್ರಸನ್ನತೆಗಳನ್ನು ಉರು ಹಾಕುವುದು ಎನ್ನಿಸಿಕೊಳ್ಳುತ್ತದೆ ಹಿಂದೂ ದೇಶದಲ್ಲಿ ಶಿಕ್ಷಣಕ್ಕೆ ಹಣವನ್ನು ಒದಗಿಸುವುದು ಸರಕಾರದವರ ಪ್ರಸನ್ನತೆಯಲ್ಲಿದೆ. ಈಗಿನ ರಾಷ್ಟ್ರಜಾಗೃತಿಯ ಕಾಲದಲ್ಲಿ ಸರ್ಕಾರದವರು ಅನೇಕ ವಿಶ್ವವಿದ್ಯಾಲಯಗಳಿಗೆ ಕೊಡಬಕ್ಕ ಹಣವನ್ನು ನಿಲ್ಲಿಸಿಬಿಟ್ಟಿದ್ದಾರೆ. ಒಂಗಾಳ ಮತ್ತು ಕಾಶಿ ಮುಂತಾದ ಕಡೆಯ ವಿದ್ಯಾ ಕ್ಷೇತ್ರಗಳೇ ಇದಕ್ಕೆ ಸಾಕ್ಷಿ. ಸರ್ಕಾರಕ್ಕೆ ನ್ಯಾಯವಾದ ದೇಶ ಭಕ್ತಿಪ್ರೇರಕವಾದ ವಿದ್ಯಾ ವಿಚಾರದಲ್ಲಿ ಸ್ವಲ್ಪವೂ ಇಷ್ಟವಿಲ್ಲವೆಂಬುದು ಗೊತ್ತಾಗುತ್ತದೆ

Rule Brittannia Rule the Waves
Britons Shall never be slaves

ಎಂದು ಎಲ್ಲಿಯವರಿಗೆ ನಾವು ಅಂಗೂಲ ಚಾಲನೆಯನ್ನು ತೋರುತ್ತಾ ನಮ್ಮ ಗುಲಾಮಗಿರಿಯ ಹಾಡನ್ನು ನಾವೇ ಹಾಡ ತ್ತೇವೆನೋ, ಅಲ್ಲಿಯವರೆಗೆ ಸರಕಾರದವರು ಸೈನ್ಯದ ಬಜೆಟ್‌ನಿಂದ ಉಳಿದ ಒಂದೆರಡು ಕೋಟಿ ರೂಪಾಯಿಗಳನ್ನು ಈ 33 ಕೋಟಿ ಪ್ರಜೆಗಳ ವಿದ್ಯಾ ವ್ಯಾಸಂಗಕ್ಕಾಗಿ ಜಿಪುಣತನದಿಂದ ಕೊಡುತ್ತಾರೆ.

ಪ್ರತಿಯೊಂದು ರಾಷ್ಟ್ರದಲ್ಲಿಯೂ ಆ ದೇಶದ ಶಿಕ್ಷಣ ಕ್ರಮವನ್ನು ಆಯಾ ಪ್ರಜೆಗಳೇ ನಿರ್ಣಯಿಸ ಬೇಕು. ಸರಕಾರವು ಸ್ವರಾಜ್ಯವಾದರೂ ಅದಕ್ಕೆ ಶಿಕ್ಷಣದ ಮೇಲೆ ಅಧಿಕಾರವಿರುವುದು ವಿದ್ಯಾ ದೃಷ್ಟಿಯಿಂದ ಕ್ಷೇಮಕರವಾದುದಲ್ಲ. ಹೀಗಿರುವಲ್ಲಿ ಪರದೇಶಿ ಸರಕಾರವು ತನ್ನ ಸಂಸ್ಕೃತಿಯಿಂದಲೂ, ಆಚಾರದಿಂದಲೂ, ಧರ್ಮದಿಂದಲೂ ಬೇರೆಯಾದ ದೇಶದ ಶಿಕ್ಷಣ ಕ್ರಮವನ್ನು ನಿರ್ಣಯಿಸ ಒಲ್ಲದುದೆಂದರೆ ಅದು ಕೇವಲ ಹಾಸ್ಯಾಸ್ಪದವೇ ಸರಿ. ಆದರೆ ಈಸ್ಟ್ ಇಂಡಿಯಾ ಕಂಪನಿಯು ಹಿಂದೂದೇಶಕ್ಕೆ ಒಂದಾಗ ಇಲ್ಲಿಯ ಶಿಕ್ಷಣ ಕ್ರಮವು ಬಹು ಮಟ್ಟಿಗೆ ಯೋಚಿತವಾಗಿದ್ದಿತ.. ಆ ಶಿಕ್ಷಣದಲ್ಲಿ ದೇಶಕ್ಕಿ ಸೃದ್ಧಿಯು ಮೊಳಕೆಯಾದ್ದಿತು ಆದು ಆರ್ಯ ಸಂಸ್ಕೃತಿಯ ಮೇಲೆ ಅವಲಂಬಿಸಿದ್ದಿತ. ಆ ಶಿಕ್ಷಣವು ನಮ್ಮ ದೇಶದ ಪರಿಸ್ಥಿತಿಗೆ ತಕ್ಕಂತೆ ಮಾರ್ಪಾಡಾಗಿದ್ದಿತು. ಆದರೆ ಆ ಶಿಕ್ಷಣವು ಆರ್ಯ ಸಂಸ್ಕೃತಿಯ ಮೂಲ ತತ್ವಗಳಿಗೆ ಅನುಗುಣವ

ಕೊಡಗು.

ಸರ್ ೧೯೨೦ನೇ ಇಸವಿ
ಜನವರಿಯ ೨೨ನೇ ಶುಕ್ರವಾರ.

ಕೊಡಗನ್ನು ಮದ್ರಾಸು ಆಧಿಪತ್ಯಕ್ಕೆ ಸೇರಿಸೋಣ.

ಮದ್ರಾಸು ಕೊಡಗರು ಕಳೆದ ತಾರೀಕು 13ರಲ್ಲಿ ಹುತ್ತೂರನ್ನು ಆಚರಿಸಿದರು. ಈ ಸಮಾರಂಭಕ್ಕೆ ಕೊಡಗಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿದ್ದ ಈಗ ಮದ್ರಾಸಿನ ಹೈ ಕೋರ್ಟು ಜಡ್ಜಿಯರಾಗಿರುವ ಶರ್ಗನಾವೆನ್‌ರವರನ್ನೂ, ಕಮಿಶನರಾಗಿದ್ದ ಈಗ ರೆವಿನ್ಯು ಬೋರ್ಡ್ ಮೆಂಬರಾಗಿರುವ ಸೂಟರವರನ್ನೂ ಅಧಿತಿಗಳಾಗಿ ಕರೆಸಿಕೊಂಡಿದ್ದರು. ಆ ಸಂದರ್ಭದಲ್ಲಿ ಇವರಿಬ್ಬರು ಮಾಡಿದ ಭಾಷಣಗಳನ್ನು ಕಳೆದ ವಾರ ವಾಚಕಮಹನೀಯರ ತಿಳುವಳಿಕೆಗಾಗಿ ಸ್ಪಷ್ಟಪಡಿಸಿದ್ದೆವು.

ಈ ಎರಡೂ ಇಂಗ್ಲೀಷ್ ಐ. ಸಿ. ಎಸ್ ಅಧಿಕಾರಿಗಳೂ, ಮತ್ತು ಯೂರೋಪಿಯರು ಒಮ್ಮತ್ತರಿರುವ ಇವರ ಅನುಯಾಯಿಗಳಿಗೂ ಕೊಡಗಿನ ಮೇಲೆ ವಿಶೇಷವಾಗಿ ಇನ್ನೆಂದಿಲ್ಲದ ಪ್ರೀತಿ ಮತ್ತು ಅಭಿಮಾನವೆಂಬುದನ್ನು ಎಲ್ಲರೂ ಪರ್ಯಾಲೋಚಿಸತಕ್ಕ ಸಂಗತಿಯಾಗಿದೆ.

ಇದು ವರೆಗೆ ಬಂದ ಎಲ್ಲಾ ಐ. ಸಿ. ಎಸ್ ಅಧಿಕಾರಿಗಳೂ ಮದ್ರಾಸು ಸರಕಾರದಲ್ಲಿ ಚಾತರ್ಯ ಮೂಡುತ್ತಾ ಇದ್ದು ಕೊಡಗಿಗೆ ಬಂದಾಕ್ಷಣವೇ ಮದ್ರಾಸನ್ನು ದೂರ, ಕೊಡಗನ್ನು ಮಾತ್ರ ಮೊಗಲಿಕ್ಕೆ ಕಾರಣವೇನೆಂಬುದನ್ನು ಕೊಂಚ ಸುಟ್ಟು ಗೆ ತರ್ಕಿಸುವ.

(1) ಕೊಡಗು ಕೃಷಿಕ್ಕೆ ಬಾರದ ಪ್ರಾಂತ್ಯ. ಇಲ್ಲಿ ಕವಿ ಕರು ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಮೇಲಿನ ವೇ ಲ್ವಿಚಾರ ತಡಿಗೆ.

2. ಆಫೀಸರುಗಳಿಗೆ ಇಲ್ಲಿ ಸರಿಯಾಗಿ ಮಾಡಲಿಕ್ಕ ಕೆಲಸ ವೇನೂ ಇರುವುದಿಲ್ಲ.

3 ಪ್ಲಾಂಟರುಗಳು ಒಹಳ ಜನರಿದ್ದಾರೆ. ಎಲ್ಲ ತರದ ವಿನೋದಕ್ಕೂ. ಆಟ ಮತ್ತು ಬೇಟೆಗೂ ಇಲ್ಲಿ ಒಹಳ ಅನುಕೂ ಲಗಳಿವೆ. ಇಲ್ಲಿಗೆ ಬಂದು ಹೋಗುವವರಿಗೆಲ್ಲಾ ವಿಶ್ರಾಂತಿ ಹೊಂದಿ ಸುಖವಡಲಿಕ್ಕೆ ತುಂಬಾ ಅವಕಾಶವಿದೆ.

ಇದಕ್ಕೆ ಒತ್ತಾಸೆಯಾಗಿ ಮೂರು ವರ್ಷಕ್ಕೆ ಹಿಂದೆ ಮದ್ರಾಸು ಎಗ್ಜಿಕ್ಯೂಟಿವ್ ಕೌನ್ಸಿಲರಾಗಿ ರಿಟೈರ್ ಆದ ಮೆ. ಡೇವಿಡ್‌ಸನ್‌ರವರು ತನ್ನ ಬೀಡಾಸೊಂದು ಭಾಷಣದಲ್ಲಿ ಕೊಡಗಿನ ವಿಷಯದಲ್ಲಿ ಮಾತಾಡುವಾಗ ಇಂಗ್ಲೆಂಡಿನಲ್ಲಿ ಹೀಗೆಂದು ಹೇಳಿರುವರು. "ನಾನು ಕೊಡಗಿನಲ್ಲಿ ಮೂರು ವರ್ಷ ಕ ಮಿಶನರಾಗಿದ್ದೆನು. ಆ ಮೂರು ವರ್ಷದ ಸರ್ವಸ್ವೇ ಬಹಳ ಆನಂದದಿಂದಲೂ, ವಿಶ್ರಾಂತಿಯಿಂದಲಾ ಕಳೆದ ಸಮಯ; ಅಷ್ಟೇ ಅಲ್ಲ, ವೈಸರಾಯ್‌ರಾದ ಲಾರ್ಡ್ ವಿಲಿಯಮ್ ಬೆಂ ಟಿಂಕರ ಕಾಲದಲ್ಲಿ ಕೊಡಗನ್ನು ಬ್ರಿಟಿಷ್ ಆಡಳತಕ್ಕೆ ಸೇರಿ ಸಬೇಕೆಂದು ಅಲೋಚನೆ ನಡೆಸುತ್ತಿದ್ದಾಗ್ಯೆ, ಕೊಡಗಿಗೆ ತೊದಲು ಒಂದ ಇಂಗ್ಲಿಷ್ ಮುಖ್ಯಸ್ಥನೊಬ್ಬನು ಹೀಗೆಂದು ಹೇಳಿದ ದನು." "ಹಿಂದೂಸ್ಥಾನದಲ್ಲಿ ಯೂರೋಪಿಯನ್ ವಾಸಕ್ಕೆ ಅತಿ ಯುಕ್ತವಾದ ಭೂಲೋಕದ ಸ್ವರ್ಗಲೋಕವು ಯಾವುದಾದೂ ಇದ್ದರೆ ಅದು ಕೊಡಗು ದೇಶ." ಇನ್ನೂ ಹೇಳಬೇಕಾದರೆ ನಮ್ಮ ಮುಂದಿನ ಸೈಂಯಾಧಾದ ಲಾರ್ಡ್ ವೆಲ್ಲಿಂಗ್‌ಡನ್ ಪ್ರಭು ಮದ್ರಾಸು ಗವರ್ನರರಾಗಿದ್ದಾಗ 1920 ರಲ್ಲಿ ಕೊಡಗಿಗೆ ಒಂದಿದ್ದರು ಆಗ ಮಡಿಕೇರಿಯ ಸೌಂದರ್ಯವನ್ನು ನೋಡಿ " ಆಡನ್ನಿನ ತೋಟ (Garden of Eaden) ಅಂದರೆ ಕೋಡಿದ್ದೆಲ್ಲಾ ಸಿಕ್ಕತಕ್ಕ ದೇಶ" ಎಂಬುದಾಗಿಯೂ ಹೇಳಿದ್ದಾರೆ.

ಕೊಡಗಿನ ಸರಕಾರವು ಪ್ಲಾಂಟರುಗಳ ಪ್ರಯೋಜನಗಳಿಗಾಗಿ ಹುಟ್ಟಿಗೆ ಗಮನ ಕೊಡುತ್ತದೆಯೇ ಹೊರತು ಗ್ರಾಮ ನಿವಾಸಿಗಳಾದ ರೈತರ ಪ್ರಯೋಜನಕ್ಕೆ ಅಷ್ಟೊಂದು ಅಲ್ಲ ವೆಂದು ಎಲ್ಲರಿಗೂ ತಿಳಿದ ವಿಷಯವೇ. ಬರೀ ಕಾಫಿಗೆ ವಿಧಿ ಸಿದ ಕಂದಾಯದಿಂದಲೂ, ಪ್ಲಾಂಟರುಗಳಿಗೆ ಈ ಆಡಳಿತದಲ್ಲಿ ಸಿಕ್ಕುವ ಸಹಾಕಾರ್ಯದಿಂದಲೂ ಆಡಳಿತದಲ್ಲಿ ಹೆಚ್ಚಿನ ವ್ಯಯೋ ಜನ ಹೊಂದುವವರಾರು ಎಂಬುದು ತಿಳಿಯತ್ತ.

ಮೆ ಕರ್ಗನ್‌ನೆನ್ನರು, ಕೊಡಗಿನ ಜನರಲ್ಲಿ ರಾಜಕೀಯ ನ ವಿಷಯ ವಿತಕ್ಕಾಗಿ ಇಷ್ಟೊಂದು ಕೂಗು ಎಂಬುದಾಗಿ ಯೂ, ದೊಡ್ಡ ವ್ಯಾಂಕ್ಷತ್ಯಕ್ಕೆ ಮೂರ್ಖಾಡು ಸಿಕ್ಕುವಾಗ ಕೊಡ ಗಿಗೂ ಸಿಕ್ಕತ್ತದೆಂದೂ ಹೇಳಿದರು.

ಬ್ರಿಟಿಷ್ ಆಡಳಿತದಲ್ಲಿ ಕೂಗಿದ ಮಗುವಿಗೆ ಹಾಲೇ ಹೊ ರತು ಕೂಗದ ಮಗುವಿಗಲ್ಲ. ಕೊಡಗು ರಾಜಭಕ್ತಿಗೆ ಪ್ರ ಖ್ಯಾತಿಗೊಂಡಿದ್ದರೂ 1909 ರಲ್ಲಿ ಹಿಂದೂಜೇತೃಲ್ಲಾ ಮೂ ರ್ತೀ ಮಿಂಟೋ ರಿಫಾರಂ ಕೊಟ್ಟಾಗ ಕೊಡಗಿಗೆ ವಿತಕ್ಕಾಗಿ ಕೊಡಲಿಲ್ಲ ? ದಂಗೆ ಕೋರರನ್ನು ಆಳಲಿಕ್ಕೆ ಇಟ್ಟಿರುವ ಸರ ಕಾರದಂತೆ ಕೊಡಗನ್ನು ಕೃಮಕ್ಕೆ ಬಾರದ ಪ್ರಾಂತ್ಯವಾಗಿ ಇ ನ್ನೂ ವಿತಕ್ಕಾಗಿ ಇಟ್ಟಿದ್ದಾರೆಂಬುದಕ್ಕೆ ಮೆ. ಕರ್ಗನ್‌ವೆನ್ನರೇ ಜನಾಬು ಕೊಡಬೇಕಾಗಿದೆ.

ಮೆ. ಸೂಟರವರು ಹೇಳಿದ ಕೆಲವು ವಾಕ್ಯಗಳು ಹಾನಿಕ್ಕ ನ್ಪೆದವಾಗಿಯೂ, ವಿಂಗಡಿಸಿ ಆಳಲು ಇರುವ ಯುಕ್ತಿಯಂಗಿ ಯೂ ಇರುವುದಕ್ಕೆ ವಿಷಾದಿಸುತ್ತೇವೆ. ಅವರು ಕೊಡಗಿನ ಲ್ಲಿ ಜೀವನದನ್ನು ಮೆರೆತರೂ ಅವರು ಕೊಡಗಿನ ಸುಖ ಮತ್ತು ಬೇಟೆಯನ್ನು ಮರೆಯಲಿಕ್ಕಿಲ್ಲವೆಂದೇ ನಮ್ಮ ಭಾವನೆ ಕೊಡಗರು ಒಳ್ಳೆಯ ಹುಡುಗರಾಗಿ ಅಂದರೆ ತನ್ನ ಸ್ಥಿತಿಯ ನ್ನು ತಾವು ತಿಳಿಯದವರಾಗಿರಬೇಕೆಂಬುದೇ ಅವರ ಭಾವನೆಯೂ ಗಿರಬೇಕು. ಯಾಕಂದರೆ—"1916 ರಲ್ಲಿ ಇಂತಿಂತಂತೆ 1921 ರಲ್ಲಿ ಕೊ ಡಗರು ಇಲ್ಲವೆಂತೆ, ಮದ್ರಾಸು ಆಧಿಪತ್ಯಕ್ಕೆ ಸೇರಲು ಚಳವಳಿ ನಡೆಸುತ್ತಿರಂತೆ; ಆಹಾ! ಎಂತ ಹಿತೋಪದೇಶ! ಯಾವಾಗಲೂ ನ್ಯಾಧಿಪತ್ಯವನ್ನನುಸರಿಸಿ ಕಳಕೊಂಡು ತನ್ನ ಆತ್ಮವನ್ನು ಪೂರಿ ಗ, ಲಾಮಾಗಿರಿಯಲ್ಲಿ ಬೀಳಲಿಕ್ಕೆ ಇಚ್ಛಿಪ ಎಳ್ಳ ಮಹನುಭಾವರು ಮೊತ್ತ ಮೆ. ಸೂಟರವರ ತಿರುಮಂತ್ರಕ್ಕೆ ಒಪ್ಪಬಹುದು.

ಕೊಡಗಿನ ವ್ಯಕ್ತಿತ್ವ ಹೋಗಿ ಬಿಡುತ್ತದೆಂಬುದಾಗಿ ಇ ನ್ನೊಂದು ಮೂತಿ ಹೇಳಿದ್ದಾದೆ. ಈ ವ್ಯಕ್ತಿತ್ವವೆಂದರೆ ಬರೀ ಕುಪ್ಪಸ, ದಟ್ಟಿಯೋ ಅಥವಾ ಅದರ ನಿಜವಾದ ಅರ್ಥವೇನೆಂ ಬುದನ್ನು ಅವರು ವಿವರಿಸಬೇಕಾಗಿದೆ ಅರು ಸಾವಿರ ಮೈ ಲು ದೂರದಿಂದ ಬಂದ ಇಸಂ ವ್ಯಕ್ತಿತ್ವವೇನು? ಇವರೇಕೆ ಇಷ್ಟು ದೂರದಿಂದ ಒಂದು ಸಂವಾದನೆ ಮಾಡುತ್ತಾರೆಂಬು ದೂ ಸಂಶಯಕ್ಕೆ ಕಾರಣವಾಗಿದೆ. ಕೊಡಗರಿಗೇನೇ ಎಲ್ಲಾ ದೊಡ್ಡ ಸಿಂಹ್ಯೋಗವಿದೆಯೆಂದು ಹೇಳುತ್ತಾರೆ. ಇದು ಯಾ ವಾಗಲೂ ಕೂಡುವುದೇನೇ ಸಿಕ್ಕತ್ತದೆಂಬ ಬರವಸೆ ಇದೆ ಯೆನು? ಒಂದುವೇಳೆ ಸಿಕ್ಕಿದರೂ 40,000 ಜನರಿಗೂ ಈ ಉ ದ್ಯೋಗಗಳೂ ದೊರಕೀತೇ? ಅರ್ಹತೆಯುಳ್ಳ ದೇಶೀಯರಿಗೆ ಯಾವಾಗಲಾದರೂ ಉದ್ಯೋಗವು ಸಿಕ್ಕಿಯೇ ಸಿಕ್ಕುತ್ತದೆ. ಮೆ. ಸೂಟರವರು ಕೊಡಗರ ಮೇಲೆ ಆಷ್ಟೊಂದು ಅಧಿವಾಸ ವುಳ್ಳವರಾಗಿದ್ದಿದ್ದರೆ ಅವರ ಕಾಲದಲ್ಲಿ ಟ್ರೈಸರು ಅಸಿಸ್ಟೆಂಟ್ ಕ ಮಿಶನರ್ ಕೌನ್ಸಿಲನ್ನು, ದೇಶದವರ ವಿರೋಧವನ್ನು ಎಣಿಸದೆ, ಹೊಗಿಸುವರೆಗೆ ವಿತಕ್ಕಾಗಿ ಕೊಟ್ಟರು? ಕೊಡಗನ್ನು ಪ್ರತ್ಯೇ ಕವಾಗಿ ಗೃಹಿಸಬೇಕಾದರು ಹೇಳುವರು ಮತ್ತು ಕೂತಗರು ಎಲ್ಲಾ ಪೂರ್ವಾಡಿಗೂ ಅರ್ಹರೆಂಬ ದಾಗಿ ಸಾರುವರು, ಅವರ ಕಾಲದಲ್ಲಿ ಮದ್ರಾಸಿಗೆ ಕೊಟ್ಟಂತ ಕೌನ್ಸಿಲನ್ನು ಕೂ ಡಗಿಗೆ ಕೊಡಲು ವಿತಕ್ಕಾಗಿ ಪ್ರಯತ್ನ ಪಟ್ಟಿಲ್ಲ? ಹೇಕದಲ್ಲಿ ಹೊಣ ವಿಲ್ಲವೆಂಬುದಾಗಿ ತೀರ್ಮಾನಿಸಿ? ಹಾಗಾದರೆ ಮೆ. ಸೂ ಟರವರು ಯೂರೋಪಿಯನ್ ಗಜೆಟೆಡ್ ಆಫೀಸ್ಯರ್‌ಗಳಾ ಸು ಖೈಯನ್ನು ಕಾಮೆ ಮಾಡಲಿಕ್ಕೂ, ಅನಂತಕ್ಕೆ ಹಣ ವ್ಯಯ ವಾದ ಸೌವುಕೂಲ ಬ್ಯಾನ್ಯತೆಯೇ ಆಲಬನ್ನು ಸಿಲ್ಲಿಸಲಿಕ್ಕೂ ವಿತಕ್ಕಾಗಿ ಪ್ರಯತ್ನ ಪಡಲಿಲ್ಲ? ಕಾಫಿಗೆ ಉತ್ಪತ್ತಿಗೆ ಸಂ ಯೋಗಿ ಕಂದಾಯ ಹಾಕಲಿಕ್ಕೆ ಇವರು ಒಪ್ಪುತ್ತಿರೋ? ಒ ಟ್ಟಾರೆ ಹೇಳಬೇಕಾದರೆ. ಇವರ ಜೇಧನೆಯು ಜಾತಿ ಜಾತಿ ಗಳಿಗೆ ಬೇಧವನ್ನುಂಟುಮಾಡಿ ಜಗಳ ಹಾಕಲಿಕ್ಕೆಯಿವುದೇ ಆ ಗಿದೆ.

ಕೂಡಗು ದೇಶಕ್ಕೆ ಮೆ. ಸೂಟರವರಂಥವರು ಶಾಶ್ವತ ಮಕ್ಕಳಿಗೆ ಹೇಳುವ ರೀತಿ ಕೊಟ್ಟ ಬುದ್ಧಿವಂತಿಕೆಗೆ ನಾವು ವೈ ಸನ ಪಡುತ್ತೇವೆ. ಯಾರೇ ಆಗಲೀ, ಒಂದೊಂದು ಸಲ ಒ ಬ್ಬೊಬ್ಬನನ್ನು ಪಂಚಸಬಹುದು. ಆದರೆ ಯಾವಾಲಾ ಎಲ್ಲರ ನ್ನೂ ವಂಚಿಸಲಿಕ್ಕೆ ಸಾಧ್ಯವಿಲ್ಲವೆಂಬುದನ್ನು ನೆ. ಸೂಟರವರು ತಿಳಿದಿರಲಿ.

ಕೂಡಗು ದೇಶವನ್ನು ಮದ್ರಾಸಿಗೆ ಸೇರಿಸುವುದು ಒಳ್ಳೆ ಯದೋ ಯಾ ಕೆಟ್ಟದೋ ಎಂಬುದು ದೇಶೀಯರಿಗೆ ತಿಳಿದ ದೆ. ಇತರ ಸೀನಿಯರ್ ನ್ಯಾಂತ್ಯಕ್ಕೆ ಕೊಟ್ಟಂಥ ಮೂರ್ಖಾಡು ಗಳನ್ನು ಇಲ್ಲಿಗೆ ಕಾಣಿಸಿದ್ದಿರೆ ಮತ್ತ ಸರಕಾರವನ್ನು ಸಡಿಸಿ ಲಿಕ್ಕೆ ಹೆಣಿಲ್ಲದಿದ್ದರೆ ಕನ್ನಪ್ಪಕ್ಕ ತಾನೇ ಮದ್ರಾಸಿಗೆ ಈ ದೇ ಶವು ಸಂಬಂಧಪಡಲಿಕ್ಕೂ ಸಾಕು. ಈ ವಿಷಯದಲ್ಲಿ ಸೈಮನ್ ಸಸ್ಯರು ಒರೆದದ್ದಕ್ಕೆ ಮೆ. ಸೂಟರವರು ಮತ್ತು ಇವರ ಅಭಿಪ್ರಾಯದವರು ಏನು ಹೇಳುತ್ತಾರೆ?

ಮಲೇರಿಯಾ ವರದಿ.

ಸರಕಾರದವರು ಈ ವಿಚಾರದಲ್ಲಿ ಒಂದು ನಂದಿಯನ್ನು ಪ್ರಕಟಿಸಿದ್ದಾರೆಂದು ಕಳೆದ ವಾರದ 'ಲೋಕಪಾವನ'ದಿಂದ ತಿಳಿಯುತ್ತೇವೆ. ಈ ವರದಿಯು ಸರಕಾರದ ವರದಿಯಾಗಿರಬೇಕಲ್ಲದೆ ಪತ್ರಿಕೆಯ ರಿಪೋರ್ಟರ್ ಅಲ್ಲವೆಂದೇ ನಮ್ಮ ಭಾವನೆ. ಹೇಗೂ ಮಲೇರಿಯಾದ ವಿಷಯ ವರದಿಯನ್ನು 'ಲೋಕಪಾವನ' ಕ್ಕಾದರೂ ಕಳುಹಿಸಿದ್ದಕ್ಕೆ ನಮ್ಮ ಸರಕಾರಕ್ಕೆ ನಾವು ವಂದಿಸುತ್ತೇವೆ.

ಮಲೇರಿಯಾ ರೋಗದಷ್ಟು ದೊಡ್ಡ ಕಷ್ಟವು ದೇಶದಲ್ಲಿ ಯಾವುದೂ ಇಲ್ಲವೆಂದೇ ಎಲ್ಲರ ಅಭಿಪ್ರಾಯ. ಇಂಥಾ ಮಹಾಮಾರಿಯನ್ನು ನಾಶ ಮಾಡಲಿಕ್ಕೆ ಸಹಾಯ ಮಾಡುವು ದು ಸರಕಾರದ ಮತ್ತು ದೇಶೀಯ ವಿಹಿನೀಯಲ್ಲರ ಮು ಖ್ಯ ಕೆಲಸವೆಂದು ನಾವು ಹೇಳಬೇಕಾಗಿಲ್ಲ. ನಮ್ಮ ಸರಕಾ ರದವರು ಈಗಾಗಲೇ ಈ ವಿಷಯದಲ್ಲಿ ಮೂಡಲಿಕ್ಕೆ ಸುರು ಮಾಡಿದ ಕೆಲಸವು ಸ್ಥಳೀಯಜನಕಾರಿಯಾಗಿ ಪರಿಣಮಿಸಿದೆ ಆದರೆ ಎರಡು ಸಬ್ ಅಸಿಸ್ಟೆಂಟ್ ಸರ್ಜನರು ಈ ಕೆಲಸದ ಚಾರ್ಜ್‌ನಲ್ಲಿದ್ದು, ಅಗಾಗ್ಗೆ ಪಟ್ಟಣಗಳನ್ನು ಬಸ್ಸ್ ಅಥವಾ ಮೋ ಟಾರಿನಲ್ಲಿ ಹೋಗಿ ಸಂದರ್ಶಿಸಿ ನಿವಾರಣೆಯ ಕೆಲಸ ಮಾಡು ತ್ತಲಿದ್ದಾರೆ. ಪಟ್ಟಣಗಳಲ್ಲಿಯಂ ಮಲೇರಿಯಾ ನಿವಾರಣೆ ಕೆ ಲಸವನ್ನು ಮುನಿಸಿಪಾಲಿಟಿಯವರೂ ಮತ್ತು ನೋಟಿಫೈಡ್ ಏ ರಿಯವರೂ ಅಥವಾ ಸ್ಥಳೀಯ ಇಶಾಖದವರೂ ಕೈಕೊಂಡು ನಡೆಸಬಹುದು. ಇವರ ಕೆಲಸವು ಗ್ರಾಮಗಳ ಕಡೆಯಲ್ಲಿ ಆಗ ಬೇಕಾಗಿದೆ. ವೀರಾಜಪೇಟೆಯಲ್ಲಿ ಅಥವಾ ಮಡಿಕೇರಿಯ ಲ್ಲಿ ಈ ಆಫೀಸರು ಖಾಯಂ ಉಳಿದುಕೊಂಡು ಪ್ರತಿ ದಿನವೂ ದೂರ ಸ್ಥಳಕ್ಕೂ ಮೋಟಿ ಹೊರಕ್ಕೆ ವಾಪಸು ಬರುವದಾಲ್ಲಿ ಅರ್ಥವೇನೂ ಇರುವುದಿಲ್ಲ. ಹೀಗೆ ಮಾಡುವುದರಿಂದ ಅವರಿ ಗೆ ಪಟ್ಟಕ್ಕೆ ಹಿಂದಿರುಗುವ ಅಧಿಕಾರವೆಯು ಹೆಚ್ಚಾಗಿ ತಮ್ಮ ನಿಜವಾದ ಕೆಲಸದಲ್ಲಿ ಆಸಕ್ತಿಯೇನೂ ಇರಲಿಕ್ಕೆ ಕಾರಣವಿರು ವುದಿಲ್ಲ. ಅಲ್ಲದೆ ಆಹಾರಕ್ಕಾಗಿ ಸ್ವಯಂಪಾಕ ಭತ್ಯವನ್ನು ಕೊಡಬೇಕಾಗಿ ಕ್ತದೆ. ಏಂಥಾದ್ದನ್ನು ಇಗ್ಗ ವಿಂದರಿಗೂ ದರೂ ಸರಕಾರದವರು ಸರ್ಯೋಚಿಸಿ, ಇಬ್ಬರೂ ಆಫೀಸ ರುಗಳಿಗೆ ತಮ್ಮ ಕೆಲಸದಲ್ಲಿ ಸರಿಯಾದ ವೇರಯನ್ನು ಗೊ ತ್ತು, ಮಾಡಿ, ಒಂದೊಂದು ಸ್ಥಳದಲ್ಲಿ ಕಡಿಮೆ ಪಕ್ಷ ಒಂದೊಂ ದು ತಿಂಗಳಾದರೂ ಇದ್ದು ನೆತ್ತು ಮುತ್ತಲಿನ ಗಾಮಗಳನ್ನು ಮಲೇರಿಯಾ ರೋಗ ನಿವಾರಣೆಗೆ ತಕ್ಕ ವಿನಾರ್ಪಡು ಕಲ್ಪಿಸು ವುದು ಅತ್ಯಾವಶ್ಯಕವಿದೆ. ಬೈತರು ಮಲೇರಿಯಾ ನಿವಾರಣೆಗೆ ಕೂಗುತ್ತಾರೆ. ಇದಕ್ಕಾಗಿ ಸಮಜಾಯಿಸಿಕೆಗೆ ವಿನಾದರೂ ಮಾಡಬೇಕೆಂಬ ಅತಿ ವ ನ್ನನ ನೀತಿಯು ಸರಕಾರದವರಲ್ಲಿರ ಕೂಡದ. ಈ ಎರಡು ಆಫೀಸರುಗಳಿಗೆ ತಕ್ಕ ಸಿಬ್ಬಂದಿಯ ನ್ನು ಸಹ ಕೊಟ್ಟು ಐದೊಂದು ವರ್ಷದಲ್ಲಿ ಕಡಿಮೆ ಪಕ್ಷ ನೂರು ಗ್ರಾಮಗಳ ಮಲೇರಿಯಾ ನಿವಾರಣೆಯ ಸಾಧನಗಳ ನ್ನು ತಲ್ಪಿಸಲಿಕ್ಕೆ ಅನುಕೂಲ ಕೊಡಬೇಕಾಗಿದೆ

ಸದ್ಯಕ್ಕೆ ಉತ್ಪಕೊಡಗಿನಲ್ಲಿಯೇ ಈ ಎರಡು ಆಫೀಸ ರುಗಳು ಕೆಲಸ ಮಾಡುವುದು ಉತ್ತಮವೆಂದು ಸೂಚಿಸುತ್ತೇ ವೆ. ಕಮಿಶನರವರಾಗಲೀ, ಸಿವಿಲ್ ಸರ್ಜನರಾಗಲೀ ಅಥ ವಾ ಈ ಆಫೀಸರುಗಳಾಗಲೀ ಮಳೆಗಾಲದಲ್ಲಿ ಸುಂಟಿಕೊಪ್ಪಲಿ ನ ಸಬ್ಬಮುತ್ತಲಿನ ಗ್ರಾಮಗಳಿಗನ್ನಾಗಲೀ, ಫೈಜಾಪೇಟೆ ಕ ಣಿವಿಹೋಬಳಿಯ ಗ್ರಾಮಗಳಿಗನ್ನಾಗಲಿ ಸಂದರ್ಶಿಸಿದ್ದಾರೋ? ಈ ಗ್ರಾಮಗಳ ಸ್ಥಿತಿಯನ್ನು ನಿಜವಾಗಿಯೂ ಅವರು ನೋಡಿ ದ್ದರೆ ಖಂಡಿತವಾಗಿಯೂ ಮಲೇರಿಯಾ ನಿವಾರಣೆಯ ಕೆಲಸ ಗಳನ್ನು ಗ್ರಾಮಗಳಲ್ಲೇ ಸುರು ಮಾಡುತ್ತಿದ್ದರು. ನಮ್ಮ ದೇಶದ ಸಿವಿಲ್ ಸರ್ಜನರಿಗೆ ನ್ಯಾಯವಾಗಿ ಹೇಳಬೇಕಾದರೆ, ಮೇಲ್ವಿಚಾರಣೆ ಕೆಲಸವಲ್ಲದೆ ಮತ್ತಾವ ಕೆಲಸವೂ ಇರುವು ದಿಲ್ಲ. ಆದರು ಈ ಗ್ರಾಮಗಳನ್ನು ಸಂದರ್ಶಿಸುವುದು ಅಗ ತ್ಯವಾಗಿದೆ. ಮತ್ತು ಮಲೇರಿಯಾ ಕೆಲಸದ ವಿಷಯದಲ್ಲಿ ಈಗ ಇರುವ ಸಬ್ ಅಸಿಸ್ಟೆಂಟ್ ಸರ್ಜನರಿಗೆ ಆಗಿಂದಾಗಿನ ಸಲಹೆಗಳನ್ನು ಕೊಡುವುದೂ ಅವಶ್ಯವಿದೆ.

ಗ್ರಾಮಗಳೇ ದೇಶದ ಆಸ್ತಿಭಾರವಾಗಿದೆ. ಗ್ರಾಮಗಳ ರೈತನ ಆರೋಗ್ಯದ ಸಂಪತ್ತಿನ ಅಧಿವೃದ್ಧಿಯೇ ದೇಶದ ಅಧಿ ವೃದ್ಧಿ. ಪಟ್ಟಣಗಳಲ್ಲಿ ಮತ್ತ ಎಕ್ಷ ಅನುಕೂಲಗಳನ್ನು ಕ ಲ್ಪಿಸುವುದಕ್ಕೆ ಸರಕಾರದವರು ಹೆಚ್ಚು ಆಸಕ್ತಿಯನ್ನು ತೋರಿ ಸುತ್ತಿರುವುದೂ, ಗ್ರಾಮಗಳನ್ನು ಉಪೇಕ್ಷೆ ಮಾಡುವುದೂ ಸ ರ್ಕಾರದವರ ಒಳ್ಳೆ ತತ್ವವಲ್ಲವೆಂದು ಕಂಠೋಕ್ತವಾಗಿ ಹೇಳು ತ್ತೇವೆ. ಇನ್ನಾದರೂ ಮಲೇರಿಯಾ ನಿವಾರಣೆ ಕೆಲಸವನ್ನು ಗ್ರಾಮಗಳ ಸಹಕಾರ ಸಂಘಗಳೊಡನೆ ಸಹಕರಿಸಿ, ಈ ಎರಡು ಆಫೀಸರುಗಳೂ, ಸಿವಿಲ್ ಸರ್ಜನರೂ ಮಾಡುವುದು ಒಳ್ಳೆಯ ದೆಂದು ಸೂಚಿಸುತ್ತೇವೆ

ನೂರಾಟಕ್ಕಿದೆ.

ವಿಸ್ತಾರವಾದ ಮನೆ, ತೋಟ ವರೆವಾಡಿರಿ;

ವೀರಾಜಪೇಟೆ ಸ್ಕೂಲ್ ರೋಡಿನಲ್ಲಿ, ಲೇಟ್ ಸಾಹು ಕಾರ್ ಮೆ. ಶಂಭಯ್ಯನವರ ವಿಸ್ತಾರವಾದ ಮನೆ, ಕೊಟ್ಟಿಗೆ, ಕಲ್ಲು ಕಟ್ಟಿದ ಬಾವಿ, ಹಿತ್ತಲು ವಿತಿಷ್ಟು ಪೂರಾಟಕ್ಕಿದೆ. ಎರ ಡು ಸೂರು ಕುಟುಂಬಗಳು ವಾಸಮಾಡಬಹುದು. ನೇಯ್ಗೆ, ಬ ನ್ ಇತ್ಯಾದಿ ಕಂಪನಿಗಳಿಗೆ ಬಹು ಅನುಕೂಲ. ಈಗ ಸರಕಾ ರವು ಸೈಕ್ಲಳ ಬೋರ್ಡಿಂಗ್‌ಗಾಗಿ ಮಾಹಿಯಾನ ನಾಲ್ಕತ್ತು ರೂಪಾಯಿಗಳಿಗೆ ಬಾಡಿಗೆಗೆ ಮಹಿಸಿಕೊಂಡಿರುತ್ತೆ. ಇಂಥಾ ಸುಸಂದರ್ಭವು ಇನ್ನು ದೂರಕಲಿಕ್ಕಿಲ್ಲ. ಹೆಚ್ಚಿನ ವಿಷಯ ಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ಸ್ವಾಮಿ ಕಾಂಭವಾನಂದ,
ಈ ಕಾರ್ಯಾಶ್ರಮ, ಸೋಮ್ಮವೀರ.

4—4

ಕೊಡಗು.

ಸತ್ಯೇನ ಭೂತದಯಯಾನಿದಾ ನೀತಿ ಪ್ರಯತೆ ಕಾಃ | ಇಕ ಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಕೋಟೆರ ಪಿ. ಚಿಣ್ಣಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೦ | ಮಡಿಕೇರಿ, ಸನ್ ೧೯೩೧ನೇ ಇಸವಿ ಜನವರಿ ತಾರೀಕು ೨ ನೇ ಶುಕ್ರವಾರ. | ಸಂಚಿಕೆ ೩೪

"The Twins,"
MERCARA

Gentleman,

Accept my immense thanks for your kind letter and the LOVELY LITTLE ROSE - - BOWL, which was to hand recently. The WORKMANSHIP of the BOWL is SPLENDID. I appreciate it very much.

Yours truly,
(Sd) Mrs. K. C. Subbiah.

Telephone :- 3145.
Telegrams - "Precious"

DIAMONDS
JEWELLERY
GOLD & SILVER ARTICLES OF ALL PATTERNS.

"The Valley"
MERCARA.

Dear sir,

I Should write to you in appreciation of the PROMPT EXECUTION of the order and the FINE WORKMANSHIP of the RING sent to me. T deal once with you is to deal again when anything is wanted.

Yours faithfully
(Sd) B S. Kushalappa.

V. SUBRAMANIA IYER
JEWELLER

2 & 3 Kuppumuthu Street, Tiruvateesvaranpet, *Designs & Estimates Free on Application* Post Box 423, Triplicane, MADRAS. 52-8

ಕಾರ್ಡು ಬರೆದು ಅಗಿನ
ಬಾಲಾರ್ಕ ಮಧುವನ್ನು
ಕಳುಹಿಸಲ್ಪಡುವದು.

ಕೋವಿಗಳು, ಕತ್ತಿಗಳು, ಬರ್ಚಗಳು, ತೋಟೆಗಳು, ಸೀಸೆಗಳು, ಮದ್ದು ಗುಂಡು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24—13 210 Abdul Rehman Street. BOMBAY.

ಕಪಿಲಹಸ್ತಾಯ ಮಲೆಯರ್ಕೈ:—ಇದು ಇಂಜಕ್ಷನ್ ಮತ್ತು ಸ್ವೀನು ಸೇವನೆಯಿಂದ ಗುಣವಾಗದಿರುವ ನುಲೆ ಜ್ವರ, ವಿಷಮ ಟೈಫಸ್ ಜ್ವರ, ೩—೫ ದಿನಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮುಂತಾದ ಜ್ವರಗಳಿಗೆ ಪಾತ್ರ, ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ ೨—೬—೦, ೩ಕ್ಕೆ ರೂ ೫—೬—೦, ೬ಕ್ಕೆ ರೂ ೭—೮—೦ ೧೨ಕ್ಕೆ ರೂ. ೧೪



ಚಂದನಾಸವ:—ಇದು ಪ್ರಮೇಹ ಮಾತ್ರ ಕೃಚ್ಛ್ರ, ಮೂತ್ರ ಜನಿಸುವಾಗ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಕಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ವೀರ್ಯ ಹೊಯ್ದಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರವಲ್ಲಿ ಧಾತು, ಮಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಕಾಯಿಕೆ, ಶೈತ್ಯಾವಸ್ಥೆ, ಮೂತ್ರ ನಾಳದಲ್ಲಿ ಚುಚ್ಚುವ ನೋವು. ಇವಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1, 3, 6ಕ್ಕೆ ರೂ 1—4—0 3—4—0; 6—12—0

ರೋಮನಾಸಿನಿ:— ಈ ಹುಡಿಯನ್ನು ಪೀಂಗಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ರಟ್ಟಿ 1ಕ್ಕೆ 6 ಆಣೆ, ೩ರಟ್ಟಿಗಳಿಗೆ ರೂ. 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆಸುಗುವುದು, ತಳ್ಳುವಿ, ಕೆಮ್ಮು, ಕಿವಿಯಿಂದ ಕೀವು ಸೋರುವುದು ಕೆವುಡು ಕನ, ಕಣ್ಣು ನೋವು, ಅಪಸ್ಮಾರ ಬಿತ್ತೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು. ಇವುಗಳೆಲ್ಲ ಖಂಡಿತ ಗುಣಮಾಡುತ್ತದೆ. ಈ ದುರುಳ ಕೊದಲನ್ನು ನಿರ್ಮೂಲ ನಿರ್ದಯವಾಗಿರುವ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಆರಾಲಕ್ಕೆ ಹಣ್ಣಾಗು | ವ ಕೂದಲನ್ನು ಕಡದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0- ೬೦೦ದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಳಾಸ:—ನುನೋಲ್ಲಾಸಿನಿ ಕಂಪೆನಿ,
52—55 ಕಲಿಲಾಗು ಕರಿ ಸೋಡಿದ್ದೆ 9- ಮಂಗಳೂರು.

ಬಾಲಾರ್ಕನುದು.

ನಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ಅದ್ಭುತ ಗುಣವಳ್ಳ ಬಾಲಾರ್ಕಮಧುವನ್ನು ಕೊಡಿರಿ. ಮಕ್ಕಳು ರೋಗ



ನೀಂದಿರಾಗಿ ಎಷ್ಟೇ ಕ್ಷೀಣವಾಗಿದ್ದರೂ ಇದರಿಂದ ಬಹು ಬೇಗ ಪುಷ್ಟಿಯೂ, ಬಲವೂ ಬರುವದು. ದಿನ ದಿನಕ್ಕೆ ಆರೋಗ್ಯವೂ, ತೂಕವೂ ಹೆಚ್ಚುವದು. ಇದು ಮಧುರವಾಗಿದೆ ಚಿಕ್ಕ ಮಕ್ಕಳು ಆನಂದದಿಂದ ಸೇವಿಸುತ್ತಾರೆ ಶೀಸೆ 1 ಕ್ಕೆ 12 ಆಣೆ, ಟಿ. ಪಿ. 9 ಆಣೆ.

52—51 ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗಾ,
(ಮೈಸೂರು ಸಂಸ್ಥಾನ)


1931

ಕೊಡಗು

ಕೊಡಗು ವಾರ ಪತ್ರಿಕೆಯು ಮಡಿಕೇರಿಯಿಂದ ಪ್ರತಿ ಶುಕ್ರವಾರವು ಪ್ರಕಟಿಸಲ್ಪಡುತ್ತಿತ್ತು. 1921 ಕ್ಕೆ ಮುಂಚೆ ಕೊಡಗಿನಲ್ಲಿ 'ಕೊಡಗು ಬಂಧ್ರಿಕೆ ಮತ್ತು ಕೊಡಗು ಅಡ್ವೈಸರ್' ಎಂದು ಹೆಸರುಳ್ಳ ಮೂರು ಪತ್ರಿಕೆಗಳು ಹೊರಡುತ್ತಿದ್ದರೂ ಅವು ಹೊರಟ ಕೆಲಕಾಲದಲ್ಲೇ ನಿಂತು ಹೋದದ್ದರಿಂದ ಕೊಡಗು ಪ್ರದೇಶಕ್ಕೆ ತನ್ನದೇ ಆದ ವರ್ತಮಾನ ಪತ್ರಿಕೆ ಇಲ್ಲದಂತಾಗಿತ್ತು. ಈ ಕೊರತೆಯನ್ನು ತುಂಬುವುದಕ್ಕಾಗಿಯೇ 1921ನೇ ಇಸವಿ ಜೂನ್ ತಾರೀಖು 3 ನೆಯ ಶುಕ್ರವಾರ ಪ್ರಾರಂಭವಾದ ಈ ಪತ್ರಿಕೆಗೆ "ಕೊಡಗು" ಎಂದು ಹೆಸರಿಸಲಾಗಿತ್ತು. ದೇಶಕ್ಕೆ ಸಂಬಂಧಿಸಿದ ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳನ್ನು ಚರ್ಚಿಸಿ ಜನರಿಗೆ ತಿಳುವಳಿಕೆ ಕೊಟ್ಟು ದೇಶದ ಸ್ಥಿತಿಗತಿಯನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ ಇದರ ಪ್ರಕಟಣೆಯನ್ನು ಪ್ರಾರಂಭಿಸಲಾಗಿತ್ತು. ಕೊಡಗಿನಲ್ಲಿ ಆರಂಭವಾದ ಜವಾಬ್ದಾರಿಯುತ ಸಂಸ್ಥೆಯೆಂಬ ಸಂಸ್ಥೆಯಿಂದ ಪ್ರಕಟಣೆಯಾಗುತ್ತಿದ್ದ ಈ ಪತ್ರಿಕೆಗೆ ಖ್ಯಾತ ಸ್ವಾತಂತ್ರ್ಯ ಯೋಧರಾದ ಶ್ರೀ. ಪಂಜಿಣಮಂಡ ಬೆಳ್ಳಿಯಪ್ಪ ಸಂಪಾದಕರಾಗಿದ್ದು ಶ್ರೀ.ಸಿ.ಎಂ. ಪ್ರಾಣೇಶ್ ಕೆಲಕಾಲ ಉಪ ಸಂಪಾದಕರಾಗಿದ್ದರು.

ರಾಜ್ಯ ಪತ್ರಾಗಾರವು ಸಂಶೋಧಕರ ಉಪಯೋಗಕ್ಕಾಗಿ ಈ ಪತ್ರಿಕೆಯನ್ನು ಅದರ ಸಂಪಾದಕರಿಂದ ತಂದು ಮೈಕ್ರೋಫಿಲ್ಮ್ ಮಾಡಿದೆ. 1921 ರ ಜೂನ್ ತಿಂಗಳಿನಿಂದ 1930 ರವರೆಗಿನ ಎಲ್ಲ ಪ್ರತಿಗಳು ಇಲ್ಲಿ ಲಭ್ಯವಿದೆ. ಪತ್ರಿಕೆಯು ಸ್ವಾತಂತ್ರ್ಯ ಪೂರ್ವದ ಕೊಡಗು ಮತ್ತು ಸಮಕಾಲೀನ ದೇಶೀಯ ಮತ್ತು ಅಂತರರಾಷ್ಟ್ರೀಯ ವಿಷಯಗಳ ಅಧ್ಯಯನಕ್ಕೆ ಉಪಯೋಗವಾಗುತ್ತದೆ. ಕೊಡಗನ್ನು ಮದ್ರಾಸ್ ಸ್ವಾತಂತ್ರ್ಯಕ್ಕೆ ಸೇರಿಸಬೇಕೆಂಬ ಚಳುವಳಿ, ಮಲಬಾರ್ ಜಿಲ್ಲೆಗೆ, ಹೊಸ ಆಡಳಿತ ಸುಧಾರಣೆಗಾಗಿ ನಡೆಸಿದ ಚಳುವಳಿ, ಕೊಡಗರ ಸ್ಥಿತಿಗತಿಗಳು, ವಿದ್ಯಾಪ್ರಗತಿ, ಬ್ರಿಟಿಷ್ ಕಮೀಷನರ್‌ರವರ ಪ್ರಜಾವಿರೋಧಿ ಕಾರ್ಯಗಳ ಖಂಡನೆ, ಕಾಂಗ್ರೆಸ್, ಸ್ವದೇಶಿ ಬಟ್ಟೆಯಂತ ಪ್ರಚಾರ ಮತ್ತು ಕರ್ನಾಟಕ ಏಕೀಕರಣ ಚಳುವಳಿ ಮುಂತಾದ ಬಹು ಅವಶ್ಯಕ ವಿಷಯಗಳನ್ನೊಳಗೊಂಡಿದೆ.

"ಕೊಡಗು"

ಕೊಡಗು ವಾರ ಪತ್ರಿಕೆಯನ್ನು ಮಡಿಕೇರಿಯಿಂದ ಪ್ರತಿ ಶುಕ್ರವಾರವು ಪ್ರಕಟಿಸಲ್ಪಡುತ್ತಿತ್ತು. 1921 ಕ್ಕೆ ಮುಂಚೆ ಕೊಡಗಿನಲ್ಲಿ 'ಕೊಡಗು ಚಂದ್ರಿಕೆ' ಮತ್ತು 'ಕೊಡಗು ಅಡ್ವೈಸರ್' ಎಂದು ಹೆಸರಿನಲ್ಲಿ ವಾರಪತ್ರಿಕೆಗಳು ಪ್ರಕಟಿಸಲ್ಪಡುತ್ತಿದ್ದರೂ ಅವು ಹೊರಟ ಕೆಲಕಾಲದಲ್ಲೇ ನಿಂತು ಹೋದದ್ದರಿಂದ ಕೊಡಗು ಪ್ರದೇಶಕ್ಕೆ ತನ್ನದೇ ಆದ ವರ್ತಮಾನ ಪತ್ರಿಕೆ ಇಲ್ಲದಂತಾಗಿತ್ತು. ಈ ಕೊರತೆಯನ್ನು ತುಂಬುವುದಕ್ಕಾಗಿಯೇ 1921ನೇ ಇಸವಿ ಜೂನ್ ತಾರೀಖು 3 ನೆಂದು ಶುಕ್ರವಾರ ಪ್ರಾರಂಭವಾದ ಈ ಪತ್ರಿಕೆಗೆ "ಕೊಡಗು" ಎಂದು ಹೆಸರಿಸಲಾಗಿತ್ತು. ದೇಶಕ್ಕೆ ಸಂಬಂಧಿಸಿದ ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳನ್ನು ಚರ್ಚಿಸಿ ಜನರಿಗೆ ತಿಳುವಳಿಕೆ ಕೊಡುವ ದೇಶದ ಸ್ಥಿತಿಗತಿಯನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ ಇದರ ಪ್ರಕಟಣೆಯನ್ನು ಪ್ರಾರಂಭಿಸಲಾಗಿತ್ತು. ಕೊಡಗಿನಲ್ಲಿ ಆರಂಭವಾದ ಜವಾನಾಭರರ ಸಂಘವೆಂಬ ಸಂಸ್ಥೆಯ ಪ್ರಕಟಣೆಯಿಂದ ಆರಂಭವಾದ ಈ ಪತ್ರಿಕೆಗೆ ಭಾರತ ಸ್ವಾತಂತ್ರ್ಯ ಯೋಧರಾದ ಶ್ರೀ. ಪಂದ್ಯಂಡ ಬೆಳ್ಳಿಯಪ್ಪ ಸಂಪಾದಕರಾಗಿದ್ದು ಶ್ರೀ. ಸಿ. ಎಂ. ಪ್ರಾಣೇಶ್ ಕೆಲಕಾಲ ಉಪ ಸಂಪಾದಕರಾಗಿದ್ದರು.

ರಾಜ್ಯ ಪತ್ರಾಗಾರವು ಸಂಶೋಧಕರ ಉಪಯೋಗಕ್ಕಾಗಿ ಈ ಪತ್ರಿಕೆಯನ್ನು ಅದರ ಸಂಪಾದಕರಿಂದ ತಂದು ಮೈಕ್ರೋಫಿಲ್ಮ್ ಮಾಡಿದೆ. 1921 ರ ಜೂನ್ ತಿಂಗಳಿನಿಂದ 1930 ರವರೆಗಿನ ಎಲ್ಲ ಪ್ರತಿಗಳು ಇಲ್ಲಿ ಲಭ್ಯವಿದೆ. ಪತ್ರಿಕೆಯು ಸ್ವಾತಂತ್ರ್ಯ ಪೂರ್ವದ ಕೊಡಗು ಮತ್ತು ಸಮಕಾಲೀನ ದೇಶೀಯ ಮತ್ತು ಅಂತರರಾಷ್ಟ್ರೀಯ ವಿಷಯಗಳ ಅಧ್ಯಯನಕ್ಕೆ ಉಪಯೋಗವಾಗುತ್ತದೆ. ಕೊಡಗನ್ನು ಮದ್ರಾಸ್ ಸ್ವಾತಂತ್ರ್ಯಕ್ಕೆ ಸೇರಿಸ ಬೇಕೆಂಬ ಚಳುವಳಿ, ಮಲಬಾರ್ ದಂಗೆ, ಹೊಸ ಆಡಳಿತ ಸುಧಾರಣೆಗಾಗಿ ನಡೆಸಿದ ಚಳುವಳಿ, ಕೊಡಗರ ಸ್ಥಿತಿಗತಿಗಳು, ವಿದ್ಯಾಪ್ರಗತಿ, ಬ್ರಿಟಿಷ ಕಮೀಷನರೆರವರ ಪ್ರಜಾವಿರೋಧಿ ಕಾರ್ಯಗಳ ಖಂಡನೆ, ಕಾಂಗ್ರೆಸ್, ಸ್ವದೇಶಿ ಬಟ್ಟೆಯಂತ ಪ್ರಚಾರ ಮತ್ತು ಕರ್ನಾಟಕ ಏಕೀಕರಣ ಚಳುವಳಿ ಮುಂತಾದ ಬಹು ಅಮೂಲ್ಯ ವಿಷಯಗಳನ್ನೊಳಗೊಂಡಿದೆ.

‘‘ ಕೊಡಗು ’’

ಕೊಡಗು ವಾರ ಪತ್ರಿಕೆಯನ್ನು ಮಡಿಕೇರಿಯಿಂದ ಪ್ರತಿ ಶುಕ್ರವಾರವು ಪ್ರಕಟಿಸಲ್ಪಡುತ್ತಿತ್ತು. 1921 ಕ್ಕೆ ಮುಂಚೆ ಕೊಡಗಿನಲ್ಲಿ ‘ ಕೊಡಗು ಚಂದ್ರಿಕೆ ಮತ್ತು ಕೊಡಗು ಅಡ್ವೈಸರ್ ’ ಎಂದು ಹೆಸರುಳ್ಳ ವಾರಪತ್ರಿಕೆಗಳು ಹೊರಡುತ್ತಿದ್ದರೂ ಅವು ಹೊರಟ ಕೆಲಕಾಲದಲ್ಲೇ ನಿಂತು ಹೋದದ್ದರಿಂದ ಕೊಡಗು ಪ್ರದೇಶಕ್ಕೆ ತನ್ನದೇ ಆದ ವರ್ತಮಾನ ಪತ್ರಿಕೆ ಇಲ್ಲದಂತಾಗಿತ್ತು. ಈ ಕೊರತೆಯನ್ನು ತುಂಬುವುದಕ್ಕಾಗಿಯೇ 1921ನೇ ಇಸವಿ ಜೂನ್ ತಾರೀಖು 3 ನೆಂದು ಶುಕ್ರವಾರ ಪ್ರಾರಂಭವಾದ ಈ ಪತ್ರಿಕೆಗೆ ‘‘ ಕೊಡಗು ’’ ಎಂದು ಹೆಸರಿಸಲಾಗಿತ್ತು. ದೇಶಕ್ಕೆ ಸಂಬಂಧಿಸಿದ ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳನ್ನು ಚರ್ಚಿಸಿ ಜನರಿಗೆ ತಿಳುವಳಿಕೆ ಕೊಟ್ಟು ದೇಶದ ಸ್ಥಿತಿಗತಿಯನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ ಇದರ ಪ್ರಕಟಣೆಯನ್ನು ಪ್ರಾರಂಭಿಸಲಾಗಿತ್ತು. ಕೊಡಗಿನಲ್ಲಿ ಆರಂಭವಾದ ಜಮಾಬಂದಿ ಸಂಘವೆಂಬ ಸಂಸ್ಥೆಯಿಂದ ಪ್ರಕಟಣೆಯಿಂದ ಆರಂಭವಾದ ಈ ಪತ್ರಿಕೆಗೆ ಖ್ಯಾತ ಸ್ವಾತಂತ್ರ್ಯ ಯೋಧರಾದ ಶ್ರೀ. ಪಂದ್ಯಂಡ ಬೆಳ್ಳಿಯಪ್ಪ ಸಂಪಾದಕರಾಗಿದ್ದು ಶ್ರೀ.ಸಿ.ಎಂ. ಪ್ರಾಣೇಶ್ ಕೆಲಕಾಲ ಉಪ ಸಂಪಾದಕರಾಗಿದ್ದರು.

ರಾಜ್ಯ ಪತ್ರಾಗಾರವು ಸಂಶೋಧಕರ ಉಪಯೋಗಕ್ಕಾಗಿ ಈ ಪತ್ರಿಕೆಯನ್ನು ಅದರ ಸಂಪಾದಕರಿಂದ ತಂದು ಮೈಕ್ರೋಫಿಲ್ಮ್ ಮಾಡಿದೆ. 1921 ರ ಜೂನ್ ತಿಂಗಳಿನಿಂದ 1930 ರವರೆಗಿನ ಎಲ್ಲ ಪ್ರತಿಗಳು ಇಲ್ಲಿ ಲಭ್ಯವಿದೆ. ಪತ್ರಿಕೆಯು ಸ್ವಾತಂತ್ರ್ಯ ಪೂರ್ವದ ಕೊಡಗು ಮತ್ತು ಸಮಕಾಲೀನ ದೇಶೀಯ ಮತ್ತು ಅಂತರರಾಷ್ಟ್ರೀಯ ವಿಷಯಗಳ ಅಧ್ಯಯನಕ್ಕೆ ಉಪಯೋಗವಾಗುತ್ತದೆ. ಕೊಡಗನ್ನು ಮದ್ರಾಸ್ ಸ್ವಾತಂತ್ರ್ಯಕ್ಕೆ ಸೇರಿಸಬೇಕೆಂಬ ಚಳುವಳಿ, ಮಲಬಾರ್ ಜಿಲ್ಲೆಗೆ ಹೊಸ ಆಡಳಿತ ಸುಧಾರಣೆಗಾಗಿ ನಡೆಸಿದ ಚಳುವಳಿ, ಕೊಡಗರ ಸ್ಥಿತಿಗತಿಗಳು, ವಿದ್ಯಾಪ್ರಗತಿ, ಬ್ರಿಟಿಷ್ ಕಮೀಷನರೆರವರ ಪ್ರಜಾವಿರೋಧಿ ಕಾರ್ಯಗಳ ಖಂಡನೆ, ಕಾಂಗ್ರೆಸ್, ಸ್ವದೇಶಿ ಬಟ್ಟೆಯಂತ ಪ್ರಚಾರ ಮತ್ತು ಕರ್ನಾಟಕ ಏಕೀಕರಣ ಚಳುವಳಿ ಮುಂತಾದ ಬಹು ಅಮೂಲ್ಯ ವಿಷಯಗಳನ್ನೊಳಗೊಂಡಿದೆ.